ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 16 ಏಪ್ರಿಲ್ 18, 1982 ಬೆಲೆ 60 ಪೈಸೆ

ಸಿ. ಪಿ. ಐ. (ಎಂ) ರಾಜ್ಯ ಸೆಕ್ರೇಟರಿಯೇಟ್ ನಿಲವು

ಕನ್ನಡವನ್ನು ಬೆಳೆಸಿ,

ಉರ್ದುವನ್ನು ಉಳಿಸಿ,

ಇಂಗ್ಲೀಷನ್ನು ದೂರವಿರಿಸಿ

ಸಿ ಪಿ ಐ (ಎಂ) ರಾಜ್ಯ ಸೆಕ್ರೆಟರಿಯೇಟ್ ಏಪ್ರಿಲ್ 9, 10 ರಂದು ಮಂಗಳೂರಿನಲ್ಲಿ ಸಭೆ ಸೇರಿ ಈ ಮೇಲ್ಕಂಡ ಘೋಷಣೆ ಕೊಟ್ಟಿದೆ.

ಗೋಕಾಕ್ ವರದಿಗೆ ಸಂಬಂಧಪಟ್ಟು ರಾಜ್ಯದ್ಯಾಂತ ತೀವ್ರ ಚಳುವಳಿ ಬೆಳೆದು ಬರುತ್ತಿರುವುದನ್ನು ಸಿ ಪಿ ಐ (ಎಂ) ರಾಜ್ಯ ಸೆಕ್ರೆಟರಿಯೇಟ್ ಗಂಭೀರವಾಗಿ ಚರ್ಚಿಸಿತು. ಸ್ವಾತಂತ್ರ್ಯ ನಂತರ ರಾಜ್ಯವನ್ನಾಳಿಕೊಂಡು ಬಂದಿರುವ ಕಾಂಗ್ರೇಸ್ ಸರಕಾರಗಳು ಕನ್ನಡವನ್ನು ಕಡೆಗಣಿಸುತ್ತಾ ಬಂದುದರ ಪರಿಣಾಮವಾಗಿ ರಾಜ್ಯದಲ್ಲಿ ಕನ್ನಡಕ್ಕೆ ದೊರೆಯು ಬೇಕಾದ ಸ್ಥಾನವಿಲ್ಲದಂತಾಗಿದೆ. ಕನ್ನಡಕ್ಕೆ ರಾಜ್ಯದಲ್ಲಿ ದೊರೆಯುಬೇಕಾದ ಸ್ಥಾನವನ್ನು ದೊರೆಯುವಂತೆ ಮಾಡುವುದರಲ್ಲಿ ಮೊದಲ ಹೆಜ್ಜೆ ಕನ್ನಡವನ್ನು ಆಡಳಿತದ ಎಲ್ಲಾ ಹಂತಗಳಲ್ಲಿ ಸರಕಾರಿ ಭಾಷೆಯುನ್ನಾಗಿ ಮಾಡುವುದು ಮತ್ತು ಇಂಗ್ಲೀಷ್ ಭಾಷೆಯುನ್ನು ದೂರ ಮಾಡುವುದು ಎಂದು ಸೆಕ್ರೆಟರಿಯೇಟ್ ಅಭಿಪ್ರಾಯ ಪಟ್ಟಿದೆ. ಆದುದರಿಂದ್ದ ಕನ್ನಡವನ್ನು ಆಡಳಿತದ ಎಲ್ಲ ಹಂತಗಳಲ್ಲು ಸರಕಾರಿ ಭಾಷೆಯುನ್ನಾಗಿ ತಕ್ಷಣವೇ ಮಾಡುವಂತೆ ಸೆಕ್ರೆಟರಿಯೇಟ್ ಸರಕಾರವನ್ನು ಒತ್ತಾಯಿಸಿದೆ. ಕನ್ನಡವನ್ನು ಪ್ರಥಮಭಾಷೆಯುನ್ನಾಗಿ ಮಾಡುವಾಗ ಅಲ್ಪಸಂಖ್ಯಾತ ಭಾಷೆಗಳು ಅದರಲ್ಲೂ ಮುಖ್ಯವಾಗಿ ಉರ್ದು ಭಾಷೆಯ ಹಿತಾಸಕ್ತಿಯುನ್ನು ರಕ್ಷಿಸಲು ಸೂಕ್ತ ಕ್ರಮ ವಹಿಸಲು ಸಿ ಪಿ ಐ (ಎಂ) ಸರಕಾರವನ್ನು ಒತ್ತಾಯಿಸಿದೆ.

ಕೋಮುವಾದಿ ಶಕ್ತಿಗಳು ಪರಿಸ್ಥಿತಿಯ ಲಾಭ ಪಡೆದು ಜನತೆಯ ಐಕ್ಯತೆಯನ್ನು ಮುರಿಯಲು ಪ್ರಯತ್ನಿಸುತ್ತಿದ್ದು ಭಾಷಾ ಪರವಾಗಿ ಹೋರಾಡುವವರು ಈ ಛಿದ್ರಕಾರಿ ಶಕ್ತಿಗಳ ತಂತ್ರಕ್ಕೆ ಬಲಿಯಾಗದಂತೆ ಎಚ್ಚರ ವಹಿಸಲೂ ಸೆಕ್ರೆಟರಿಯೇಟ್ ಕರೆನೀಡಿದೆ.

ಭಾಷೆಯೆಂಬದು ಜನತೆಯನ್ನು ಒಗ್ಗಟ್ಟುಮಾಡುವ ಸಾಧನವಾಗ ಬೇಕೆ ಹೊರತು ಅದನ್ನು ನಾಶಮಾಡುದಕ್ಕಲ್ಲ ಎಂಬುದನ್ನು ಸಿ ಪಿ ಐ (ಎಂ) ಜ್ಞಾಪಿಸುತ್ತದೆ.

ಕನ್ನಡವನ್ನು ಬೆಳೆಸಿ, ಅದರಲ್ಲೂ ಅಲ್ಪಸಂಖ್ಯಾತ ಭಾಷೆಗಳ, ಅದರಲ್ಲೂ ಮುಖ್ಯವಾಗಿ ಉರ್ದು ಭಾಷೆಯ ಹಿತಾಸಕ್ತಿಯುನ್ನು ರಕ್ಷಿಸಲೂ ಮತ್ತು ಈ ದೃಷ್ಟಿಯುನ್ನಿರಿಸಿ ಗೋಕಾಕ್ ಸಮಿತಿಯ ವರದಿಯ ಶಿಫಾರಸುಗಳನ್ನು ಜಾರಿಗೊಳಿಸುವ ಬಗ್ಗೆ ಭಾಷಾ ಪ್ರತಿನಿಧಿಗಳು, ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ವಿಧ್ಯಾಭ್ಯಾಸ ಪರಿಣಿತರು ಮತ್ತು ಸರಕಾರದ ಪ್ರತಿನಿಧಿಗಳ ಸಭೆಯುನ್ನು ಕರೆಯುವಂತೆ ಸಿ ಪಿ ಐ (ಎಂ) ಒತ್ತಾಯಿಸುತ್ತದೆ.

ಕನ್ನಡ ಬೆಳೆಸಿ, ಉರ್ದುವನ್ನು ಉಳಿಸಿ, ಇಂಗ್ಲೀಷನ್ನು ದೂರವಿರಿಸಲು ರಾಜ್ಯದಾದ್ಯಂತ ಪ್ರಜಾಪ್ರಭುತ್ವ ಚಳುವಳಿಯುನ್ನು ಮತ್ತು ಅಭಿಪ್ರಾಯವನ್ನು ರೂಪಿಸಲು ಮತ್ತು ಕೊಮುವಾದಿಗಳನ್ನು ಜನತೆಯಿಂದ ಪ್ರತ್ಯೇಕಿಸಲು ಸಿ ಪಿ ಐ (ಎಂ) ಸೆಕ್ರೆಟರಿಯೇಟ್ ತನ್ನೆಲ್ಲಾ ಸದಸ್ಯರಿಗೆ ಮತ್ತು ಘಟಕಗಳಿಗೆ ಕರೆ ನೀಡಿದೆ.

ಗಡೀಪಾರು ಕ್ರಮ ಖಂಡನೆ

ಹಾಸನದ ರೈತ ಮುಖಂಡ ಶ್ರೀ ಮಂಜುನಾಥ ದತ್ತ ಮತ್ತಿತರರನ್ನು ಗಡೀಪಾರು ಮಾಡಲು ಸರಕಾರವು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಸಿ. ಪಿ. ಐ (ಎಂ) ರಾಜ್ಯ ಸೆಕ್ರೆಟಾರಿಯೇಟ್ ಉಗ್ರವಾಗಿ ಸರಕಾರವನ್ನು ಖಂಡಿಸುವ ನಿರ್ಣಯ ಮಾಡಿದೆ.

ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷ ಮತ್ತು ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಸದಸ್ಯರಾದ ಕಾಂ। ಎಸ್. ಲಕ್ಷ್ಮಯ್ಯನವರನ್ನು ಏಪ್ರಿಲ್ 5 ರಂದು ರೈತರ ಧರಣಿ ಸತ್ಯಾಗ್ರಹ ಸಂದರ್ಭದಲ್ಲಿ, ಚಿಕ್ಕಬಳ್ಳಾಪುರದಲ್ಲಿ ಕೋರ್ಟು ಆವರಣದೊಳಗೆ ಹೋದರೆಂಬ ಸುಳ್ಳು ಅಪಾದನೆ ಮೇಲೆ ಬಂಧಿಸಿ ಜುಲ್ಮಾನೆ ವಿಧಿಸಿರುವುದನ್ನು ಸೆಕ್ರೆಟರಿಯೇಟ್ ತೀವ್ರವಾಗಿ ಖಂಡಿಸಿದೆ.

ಸರಕಾರದ ರೈತ ವಿರೋಧಿ ಮತ್ತು ಪ್ರಜಾಪ್ರಭುತ್ವ ವಿರೋಧಿ ನೀತಿಗಳೆದುರಾಗಿ ಸಂಯುಕ್ತ ಚಳುವಳಿ ನಡೆಸಲು ಎಲ್ಲಾ ಸಂಘಟನೆಗಳಿಗೆ ಸಿ.ಪಿ.ಐ. (ಎಂ) ಕರೆ ನೀಡಿದೆ.

ಕೊನೆಗೊಂಡ ಅನಿಶ್ಚತೆ

ಪಶ್ಚಿಮ ಬಂಗಾಳ, ಕೇರಳ, ಹಿಮಾಚಲ ಪ್ರದೇಶ ಮತ್ತು ಹರ್ಯಾಣ ರಾಜ್ಯಗಳಲ್ಲಿ ಮೇ 19 ರಂದು ವಿಧಾನ ಸಭಾ ಚುನಾವಣೆ ನಡೆಯುವುದಾಗಿ ಘೋಷಿಸಿರುವುದರ ಮೂಲಕ ಈ ರಾಜ್ಯಗಳಲ್ಲಿ, ಅದರಲ್ಲೂ ಮುಖ್ಯವಾಗಿ ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿ ಚುನಾವಣೆಯ ಬಗ್ಗೆ ಇದ್ದ ಅನಿಶ್ಚಿತತೆ ಹೋಗುವಂತಾಗಿದೆ. ಪಶ್ಚಿಮ ಬಂಗಾಳದಲ್ಲಿ ಚುನಾವಣೆಯುನ್ನು ಮುಂದೂಡುವುದಕ್ಕೂ, ಕೇರಳದಲ್ಲಿ ಅಲ್ಪ ಸಂಖ್ಯಾತ ಬೆಂಬಲದಿಂದ ಸರಕಾರವನ್ನು ಮುಂದುವರೆಸುವುದಕ್ಕೂ ಕಾಂಗ್ರೆಯು ಹಾಕಿಕೊಂಡ ತಂತ್ರಗಳೆಲ್ಲಾ ವಿಫಲವಾಗಿ, ಜನಾಭಿಪ್ರಾಯ ಮತ್ತು ಕಾನೂನುಗಳಿಗೆ ಮಣಿದು ಈ ರಾಜ್ಯಗಳಲ್ಲಿ ಚುನಾವಣೆ ನಡೆಸುವಂತಾಗಿದೆ.

ಕರ್ನಾಟಕ ರಾಜ್ಯದಲ್ಲಿ ಮಧ್ಯಂತರ ಸಾರ್ವತ್ರಿಕ ಚುನಾವಣೆ ನಡೆಯುವುದಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹೊರತು ಉಳಿದೆಲ್ಲಾ ಪಕ್ಷಗಳೂ ಕಳೆದ ಒಂದು ವರ್ಷದಿಂದ ಪ್ರಚಾರವೆಸಗುತ್ತಾ ಬಂದಿವೆ. ಜನತಾ ಪಕ್ಷ,

ಸಂಪಾದಕೀಯ

ಅರಸು ಕಾಂಗ್ರೆಸ್, ಬಾಜಪಗಳ ಮುಖಂಡರುಗಳು ದಿನ ರಾತ್ರಿ ಎಂಬಂತೆ ಚುನಾವಣೆ ನಡೆಯುವುದಾಗಿ ಹೇಳಿಕೆಗಳನ್ನೀಯುತ್ತಾ ಬಂದಿರುವರು. ಪಶ್ಚಿಮ ಬಂಗಾಳ, ಕೇರಳ ರಾಜ್ಯಗಳಲ್ಲಿ ಚುನಾವಣೆ ನಡೆಯುವಾಗಲೇ ಆಂಧ್ರ ರಾಜ್ಯ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಚುನಾವಣೆ ನಡೆಯುವದೆಂಬ ಸುದ್ದಿ ಇತ್ತು. ರಾಜ್ಯದಲ್ಲಿ ಜನತೆಯ ಸಮಸ್ಯೆಗಳ ಬಗ್ಗೆ ಪ್ರಜಾಪ್ರಭುತ್ವ ಚಳುವಳಿ ನಡೆಸುವುದಕ್ಕೆ ಬದಲು ಚುನಾವಣಾ ಪ್ರಚಾರ, ಸಿದ್ಧತೆಗಳಿಗೆ ಮುಖ್ಯ ವಿರೋಧ ಪಕ್ಷಗಳೆಲ್ಲಾ ಗಮನವೀಯುತ್ತಾ ಬಂದಿವೆ. ಈ ಊಹಾಪೋಹಗಳಿಗೆ ಸದ್ಯ ಕೊನೆ ಹಾಕಲಾಗಿದೆ. ಸಧ್ಯ ಕರ್ನಾಟಕ ರಾಜ್ಯದಲ್ಲಿ ಮಧ್ಯಂತರ ಚುನಾವಣೆ ನಡೆಯುವ ಲಕ್ಷಣ, ಸಾಧ್ಯತೆಗಳಿಲ್ಲವೆಂಬುದು ಸ್ಪಷ್ಟವಾಗಿದೆ.

ಹರ್ಯಾಣ, ಹಿಮಾಚಲ ಪ್ರದೇಶ, ಕೇರಳ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಚುನಾವಣೆಯುನ್ನು ಎದುರಿಸಲು ನಡೆಸುತ್ತಿರುವ ಸಿದ್ಧತೆಗಳನ್ನು ಮತ್ತು ಕರ್ನಾಟಕ ಹಾಗೂ ಇನ್ನಿತರ ಹಲವು ರಾಜ್ಯಗಳಲ್ಲಿನ ಪರಿಸ್ಥಿತಿಯುನ್ನು ವೀಕ್ಷಿಸಿದರೂ ಒಂದು ವಿಚಾರವಂತೂ ಸ್ಪಷ್ಟವಾಗುತ್ತಲಿದೆ: ಕೇರಳ, ಪಶ್ಚಿಮ ಬಂಗಾಳಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡ ಪ್ರಜಾಪ್ರಭುತ್ವರಂಗ ಮತ್ತು ಎಡರಂಗಗಳು ಇಂದಿರಾ ಕಾಂಗ್ರೆಸ್ಸಿಗೆ ಪರಿಣಾಮಕಾರಿ ಸವಾಲು ಕೊಡಲು ಸಜ್ಜಾಗುತ್ತಿರುವಾಗ ಆಳುವ ವರ್ಗಗಳಿಗೆ ಸೇರಿದ ವಿರೋಧ ಪಕ್ಷಗಳಾದ ಜನತಾ ಪಕ್ಷ, ಸಮಾಜವಾದಿ ಕಾಂಗ್ರೆಸ್, ಲೋಕದಳ, ಬಾ ಜ ಪ ಮೊದಲಾದವುಗಳಲ್ಲಿರುವ ಚಂಚಲತೆ, ಅಧೈರ್ಯತೆ ಎದ್ದು ತೋರುತ್ತಿದೆ. ಈ ಪಕ್ಷಗಳೆಲ್ಲಾ ಒಂದು ಸೇರಿದಲ್ಲಿ ಹಾಗೂ ಕಾಂಗ್ರೈ ವಿರೋಧ ಮತಗಳು ಹಂಚಿ ಹೋಗದಂತೆ ನೋಡಿದಲ್ಲಿ ಹಿಮಾಚಲ ಪ್ರದೇಶ್, ಹರ್ಯಾಣಗಳಲ್ಲಿ ಕಾಂಗ್ರೈಗೆ ಪ್ರಭಲ ಸವಾಲನ್ನೊಡ್ಡಿ ಅದನ್ನು ಸೋಲಿಸುವುದೂ ಸಾಧ್ಯವಿದೆ. ಆದರೆ ಹಾಗಾಗುವ ಲಕ್ಷಣ ಕಂಡು ಬರುತ್ತಿಲ್ಲ !

ಕರ್ನಾಟಕ ರಾಜ್ಯದಲ್ಲಿ ಇಂದಲ್ಲವಾದರೆ ಮುಂದೆ ಚುನಾವಣೆ ನಡೆಯಲೇ ಬೇಕು ತಾನೆ ? ಚುನಾವಣೆಯಾಗುವಾಗ ವಿರೋಧ ಪಕ್ಷಗಳು ಒಂದು ಸೇರಿಕೊಂಡು ಅದನ್ನು ಎದುರಿಸುವ ದಷ್ಟೇಅಲ್ಲ, ನಿರ್ದಿಷ್ಟಕಾರ್ಯಕ್ರಮಗಳ ಆಧಾರದಲ್ಲಿ ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುತ್ತಾ ಜನತೆಯ ವಿಶ್ವಾಸ ಪಡೆದು, ಒಂದು ಬದಲಿಯುನ್ನು ರೂಪಿಸಬೇಕು. ರಾಜ್ಯದ ಎಡ ಪಕ್ಷಗಳು, ಅಂದರೆ ಮುಖ್ಯವಾಗಿ ಸಿ. ಪಿ. ಐ. (ಎಂ) ಮತ್ತು ಸಿ. ಪಿ. ಐ. ಈ ದಿಸೆಯಲ್ಲಿ ಹೆಚ್ಚು ಶ್ರಮಿಸಬೇಕು. ಅದರೊಂದಿಗೆ ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸಿ ಹೋರಾಟಗಳ ಮೂಲಕ ಮುನ್ನಡೆಯುಬೇಕು. ಈಗಾಗಲೇ ರಾಜ್ಯದ ವಿಧಾನ ಸಭೆಯುಲ್ಲಿ ಸಾಧಿಸಿಕೊಂಡಿರುವ ಐಕ್ಯತೆಯುನ್ನು ವಿಧಾನ ಸಭೆಯ ಹೊರಗೆ ತೆಗೆದುಕೊಂಡು ಹೋಗಬೇಕು. ಹಾಗೆ ಮಾಡಿಲ್ಲವಾದರೆ ಜನತೆಯುಲ್ಲಿ ತೀವ್ರವಾಗಿ ಬೆಳೆದು ಬರುತ್ತಿರುವ ಅತೃಪ್ತಿ ಮತ್ತು ಕಾಂಗ್ರೈ ವಿರೋಧ ಮನೋಭಾವನೆಗಳ ಪ್ರಯೋಜನ ಪಡೆಯುವುದು ಅಸಾಧ್ಯ.

ಪ್ರೆಸ್ ಕಾರ್ಮಿಕರ ಕನಿಷ್ಠ ಕೂಲಿ ಜಾರಿಗೆ ಒತ್ತಾಯ

ಎಸ್.ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯು ಮಂಗಳೂರಿನಲ್ಲಿ ಸಭೆ ಸೇರಿ ಈ ಕೆಳಕಂಡ ಪತ್ರಿಕಾ ಪ್ರಕಟನೆ ನೀಡಿದೆ.

"ಕರ್ನಾಟಕ ಸರಕಾರವು ಪ್ರೆಸ್ ಕಾರ್ಮಿಕರ ಕನಿಷ್ಠ ವೇತನವನ್ನು ಪ್ರಕಟಿಸಿದ್ದು 1-3-82 ರಿಂದ ಇದು ಜ್ಯಾರಿಯಾಗಲಿದೆ. ಈ ಪ್ರಕಟನೆಯ ಪ್ರಕಾರ ಮಂಗಳೂರಿನಲ್ಲಿ ಸ್ಕಿಲ್ಡ್ (ನುರಿತ) ಕಾರ್ಮಿಕರಿಗೆ ತಿಂಗಳಿಗೆ 400 ರೂ. ನಂತೆ, ಸೆಮಿಸ್ಕಿಲ್ಡ್ (ಅರೆಕುಶಲ) ಕೆಲಸಗಾರರಿಗೆ ತಿಂಗಳಿಗೆ ರೂ. 362 ರಂತೆಯೂ, ಅನ್‌ಸ್ಕಿಲ್ಡ್ ಕೆಲಸಗಾರರಿಗೆ ರೂ. 285 ರಂತೆಯೂ ದೊರೆಯಲಿದೆ."

"ಕನಿಷ್ಟ ವೇತನವನ್ನು ಪ್ರೆಸ್ ಮಾಲೀಕರುಗಳು ತಕ್ಷಣ ಜ್ಯಾರಿಗೊಳಿಸಬೇಕೆಂದು ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ ಒತ್ತಾಯಿಸುತ್ತದೆ." ಕೈಗಾರಿಕಾ ಹಿತದೃಷ್ಟಿಯಿಂದ ಕೂಡಲೇ ಕನಿಷ್ಟ ವೇತನ ಜ್ಯಾರಿ ಮಾಡಬೇಕೆಂದು ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿ ಕಾಂ। ಭುಜಂಗಮಾರ್ಲರು, ಒತ್ತಾಯಿಸಿದ್ದಾರೆ.

ಸಿಂದನೂರು ರೈತ್ತರಿಗೆ ವಿದ್ಯಾರ್ಥಿಗಳ ಬೆಂಬಲ

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕು ರೈತ ಮತ್ತು ಕಾರ್ಮಿಕ ಸಂಘವು ತುಂಗಭದ್ರಾ ಮುಖ್ಯ ಕಾಲುವೆಯಲ್ಲಿ 30-4-82ರ ವರೆಗೆ ನೀರು ಪೂರೈಸಲು ಮನವಿಮಾಡಿಕೊಂಡಿತ್ತು. ಸರಕಾರ ಯಾವುದೇ ಕ್ರಮ ಕೈಗೊಂಡಿಲ್ಲವಾದ್ದರಿಂದ ರೈತ ಮತ್ತು ಕಾರ್ಮಿಕ ಸಂಘದ ನೇತೃತ್ವದಲ್ಲಿ 5-4-82 ರಿಂದ ಉಪವಾಸ ಸತ್ಯಾಗ್ರಹ ಆರಂಭವಾಗಿದೆ.

ಈ ಹೋರಾಟಕ್ಕೆ ಬೆಂಬಲ ನೀಡಿ, ಸಿಂಧನೂರು ಎಸ್.ಎಫ್.ಐ. ಘಟಕವು ಕರಪತ್ರಗಳನ್ನು ಮುದ್ರಿಸಿ, ರೈತರ ಬೇಡಿಕೆಗಳನ್ನು ಈಡೇರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಒತ್ತಾಯಿಸಿದೆ.

9-4-82 ರಂದು ಸಿಂಧನೂರಿನಲ್ಲಿ ರೈತರು ಏರ್ಪಡಿಸಿದ್ದ ಬಹಿರಂಗಸಭೆಯನ್ನುದ್ದೇಶಿಸಿ ಎಸ್. ಎಫ್. ಐ ಜಿಲ್ಲಾ ಸಮಿತಿಯ ಉಪಾಧ್ಯಕ್ಷೆ ಕಾಂ। ಮಂಜುಳಾ, ಸಿಂಧನೂರು ಕಾಲೇಜು ಘಟಕದ ಅಧ್ಯಕ್ಷ ಕಾಂ। ವೀರಭದ್ರಗೌಡ ಹಾಗೂ ಬಸವರಾಜ ಕಾಂಬಳೆ ಮಾತನಾಡಿ ರೈತರ ಹೋರಾಟಕ್ಕೆ ವಿದ್ಯಾರ್ಥಿಗಳ ಬೆಂಬಲ ಘೋಷಿಸಿದರು.

ಎಪ್ರಿಲ್ 25, 26 ರಂದು ಬಿಜಾಪುರ ಜಿಲ್ಲಾ ರೈತ ಸಂಘದ ಎರಡನೇ ಸಮ್ಮೇಳನ

ಏಪ್ರಿಲ್ 25 ಮತ್ತು 26 ರಂದು ವಿಜಾಪುರದಲ್ಲಿ ಜಿಲ್ಲಾ ರೈತ ಸಂಘದ ಎರಡನೇ ಸಮ್ಮೇಳನ ನಡೆಯಲಿದೆ. ನಗರದ ಇಂಡಿ ರೋಡ್‌ನಲ್ಲಿರುವ ನೀಲಕಂಠೇಶ್ವರ ದೇವಸ್ಥಾನದಲ್ಲಿ ಸಮ್ಮೇಳನ ಸಮಾವೇಶಗೊಳ್ಳಲಿದೆ.

ಸಮ್ಮೇಳನಕ್ಕೆ ಪ್ರಾಂತ ರೈತ ಸಂಘದ ಅಧ್ಯಕ್ಷ ಕಾಂ। ಪಿ ರಾಮಚಂದ್ರರಾವ್, ಪ್ರಧಾನ ಕಾರ್ಯದರ್ಶಿ ಕಾಂ। ವಿ. ಎಸ್. ಹಳಕಟ್ಟಿ, ಕಾಂ। ಎಂ. ಕೆ. ಭಟ್ ಮತ್ತಿತರ ಧುರೀಣರು ಭಾಗವಹಿಸಲಿರುವರು.

ಸಮ್ಮೇಳನ ರೈತರನ್ನು ಭಾಧಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಲಿದೆ. ಸಮ್ಮೇಳನದ ಅಂಗವಾಗಿ ಏಪ್ರಿಲ್ 26 ರಂದು ಬಸವೇಶ್ವರ ಚೌಕದಲ್ಲಿ ಬಹಿರಂಗ ಸಭೆ ನಡೆಯಲಿದೆ.

ಜಿಲ್ಲೆಯಾದ್ಯಂತ ರೈತರು ಸಮ್ಮೇಳನದಲ್ಲಿ ಪಾಲ್ಗೊಂಡುಯಶಸ್ವೀಗೊಳಿಸಬೇಕೆಂದು ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ। ಭೀಮಶಿ ಕಲಾದಗಿ, ಕಾರ್ಯದರ್ಶಿ ಎಂ. ಆಯ್. ಪಾಟೀಲ್, ಖಜಾಂಚಿ ಎ. ಎಚ್. ಹೊನ್ನುಟಗಿ ಮನವಿ ಮಾಡಿಕೊಂಡಿದ್ದಾರೆ.

ಸ್ವಾತಂತ್ರ್ಯ ಸಂಗ್ರಾಮದ ರುಧಿರ ಅಧ್ಯಾಯ

ಜಾಲಿಯನ್‌ವಾಲಾಬಾಗ್ ದುರಂತ

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಜನರಲ್ ಡಾಯರ್‌ನ ನೇತೃತ್ವದಲ್ಲಿ ನಡೆದ ಜಾಲಿಯನ್ ವಾಲಾಭಾಗ್ ಹತ್ಯಾಕಾಂಡ ಸಾಮ್ರಾಜ್ಯ ಶಾಹಿಗಳ ರಕ್ತಪಿಪಾಸೆಗೆ ನಿದರ್ಶನವಾಗಿ ನಿಂತಿದೆ. 13 ಏಪ್ರಿಲ್ 1919 ರಂದು ಪಂಜಾಬ್‌ನ ಅಮೃತ್‌ಸರದ ಜಾಲಿಯನ್‌ವಾಲಾಬಾಗ್‌ನಲ್ಲಿ ನಡೆದ ಹತ್ಯಾಕಾಂಡದಲ್ಲಿ ಸರಕಾರಿ ಅಂಕಿ ಅಂಶಗಳ ಪ್ರಕಾರ 386 ಜನ ಮರಣಹೊಂದಿ 1200 ಜನ ಗಾಯಗೊಂಡರೆಂದು ಅಂದಾಜಿತ್ತು. ಬ್ರಿಟಿಷ್ ಸಂಸತ್ ಸದಸ್ಯ ಫೆನ್ನರ್ ಬ್ರಾಕ್‌ವೇ ತನ್ನ 'ದಿ ಇಂಡಿಯನ್ ಆಯ್.ಸಿ.ಎಸ್.' ಎಂಬ ಪುಸ್ತಕದಲ್ಲಿ ಈ ಅಂಕಿ ಅಂಶಗಳು ಪೂರ್ತಿ ಸುಳ್ಳೆಂದು ಬರೆದಿದ್ದನು.

ಹತ್ಯಾಕಾಂಡದ ಕುರಿತು ವರದಿ ಸಲ್ಲಿಸಲು ರಚಿತವಾದ ಕಾಂಗ್ರೆಸ್ ಸಬ್ ಕಮಿಟಿ ಎದುರು ಅನೇಕರು ಸಾಕ್ಷ್ಯ ನುಡಿದು ಏಪ್ರಿಲ್ 13ರ ಗುಂಡಿನ ಸುರಿಮಳೆಯ ಅಮಾನುಷ ಘಟನೆಯನ್ನು ವಿವರಿಸಿದ್ದರು. ನೂರಾರು ಕಂದಮ್ಮಗಳು, ಹೆಣ್ಣು ಮಕ್ಕಳೂ ಮಡಿದವರಲ್ಲಿ ಸೇರಿದ್ದರು. ಈ ಹತ್ಯಾಕಾಂಡದಲ್ಲಿ ನಿಧನರಾದವರು ಸುಮಾರು 1000 ಜನಕ್ಕಿಂತಲೂ ಹೆಚ್ಚೆಂದು ಪ್ರತ್ಯಕ್ಷದರ್ಶಿಗಳು ಸಾಕ್ಷ್ಯ ನುಡಿದರು.

ಮೊದಲ ಮಹಾ ಯುದ್ಧಾನಂತರ ಬ್ರಿಟೀಷರು ಮೊದಲು ತಾವು ಕೊಟ್ಟ ಆಶ್ವಾಸನೆಗಳನ್ನು ನಿರಾಕರಿಸಿದ್ದರು. ಸ್ವಾತಂತ್ರ್ಯ ಹೋರಾಟವನ್ನು ನಾನಾ ರೀತಿಯ ಕಾನೂನುಗಳನ್ನು ಜಾರಿಗೆ ತಂದರು. ಈ ಕಾನೂನುಗಳಲ್ಲಿ 'ರೌಲೆಟ್ ಆ್ಯಕ್ಟ್' ಕುಖ್ಯಾತವಾದುದು. 'ಇಂಡಿಯಾ ಟುಡೇ' (India Today) ಪುಸ್ತಕದ ಲೇಖಕ ರಜನಿಪಾಮ್‌ದತ್ತರು ಈ ರೀತಿ ಬರೆದಿದ್ದಾರೆ: "ಈ ಕಾನೂನಿನ ಉದ್ದೇಶ ಹೋರಾಟಗಳನ್ನು ಹತ್ತಿಕ್ಕುವುದಾಗಿತ್ತು; ವಿಚಾರಣೆ ಇಲ್ಲದೇ ಜನರನ್ನು ಬಂಧಿಸುವ ಅಧಿಕಾರವನ್ನು ಪಡೆಯುವದಾಗಿತ್ತು."

ಈ ಕುಖ್ಯಾತ ಕಾನೂನನ್ನು ವಿರೋಧಿಸಿ ದೇಶದಾದ್ಯಂತ ಪ್ರತಿಭಟನೆ ಕಂಡು ಬಂದಿತು. ಪಂಜಾಬ್‌ನಲ್ಲಿ ಖ್ಯಾತ ಧುರೀಣರಾದ ಡಾ॥ ಸೈಫುದ್ದೀನ ಕಿಚಲೂ ಮತ್ತು ಡಾ॥ ಸತ್ಯಪಾಲರು ಬಂಧಿಸಲ್ಪಟ್ಟಿದ್ದರು. ಈ ಬಂಧನವನ್ನು ಪ್ರತಿಭಟಿಸಿ ಅಮೃತಸರದ ಜಾಲಿಯನ್ ವಾಲಾಬಾಗ್‌ನಲ್ಲಿ ಏಪ್ರಿಲ್ 13 ರಂದು ಬೃಹತ್ ಪ್ರತಿಭಟನಾ ಪ್ರದರ್ಶನ ಏರ್ಪಡಿಸಿತ್ತು. ಏಪ್ರಿಲ್ 13 ವೈಶಾಖದ ಮೊದಲ ದಿನವಾಗಿತ್ತು. ಈ ದಿನವನ್ನು ಪಂಜಾಬ್‌ನಲ್ಲಿ ವರ್ಷಾರಂಭದ ದಿನವಾಗಿ ಜನತೆ ಆಚರಿಸುತ್ತಿತ್ತು. ಈ ವರ್ಷಾರಂಭದ ದಿನವೇ ಭೀಕರ ಹತ್ಯಾಕಾಂಡ ಜರುಗಿ ಜಾಲಿಯನ್‌ವಾಲಾಬಾಗ್ ನೂರಾರು, ಸಾವಿರಾರು ಜನರ ನೆತ್ತರಿನಿಂದ ತೊಯ್ದು ಹೋಗಿತ್ತು.

ಜಾಲಿಯನ್‌ವಾಲಾಬಾಗ್‌ನ ಸುತ್ತಲೂ ಗೋಡೆ ಇದ್ದು ಒಂದು ಕಡೆ ಮಾತ್ರ ದಾರಿ ಇದ್ದ ಒಂದು ದೊಡ್ಡ ಮೈದಾನ (Park). ಸುಮಾರು 10,000 ಜನ ಈ ಮೈದಾನದಲ್ಲಿ ಸಮಾವೇಶಗೊಂಡಿದ್ದರು. 'ರೌಲೆಟ್ ಆ್ಯಕ್ಟ್'ನ್ನು ಉಲ್ಲಂಘಿಸಿದ ಜನತೆಗೆ 'ಪಾಠ ಕಲಿಸಲು' ನಿರ್ಧರಿಸಿದ ಜನರಲ್ ಡಾಯರ್‌ನು ತನ್ನ ಪಡೆಯೊಂದಿಗೆ ಜಾಲಿಯನ್‌ವಾಲಾಬಾಗ್‌ಗೆ ಅಗಮಿಸಿದನು. ಯಾವುದೇ ಪ್ರಚೋದನೆಯೂ ಇಲ್ಲದೇ, ಯಾವ ಮುನ್ಸೂಚನೆಯನ್ನೂ ನೀಡದೇ ಮುಗ್ಧ ಜನತೆಯ ಮೇಲೆ ಡಾಯರ್‌ನ ಆದೇಶದಂತೆ 1600 ಸುತ್ತು ಗುಂಡುಗಳನ್ನು ಹಾರಿಸಲಾಯಿತು.

ಈ ಘಟನೆಯ ನಂತರವೂ ಸಂತೃಪ್ತನಾಗದ ಡಾಯರ್ ಅಮೃತಸರ ನಗರಕ್ಕೆ ವಿದ್ಯುತ್-ನೀರು ಸೌಲಭ್ಯವನ್ನು ಕಡಿತ ಮಾಡಿದ್ದನು.

ಬ್ರಿಟಿಶ್ ಸಾಮ್ರಾಜ್ಯಶಾಹಿಗಳು ಸ್ವಾತಂತ್ರ ಹೋರಾಟವನ್ನು ಹತ್ತಿಕ್ಕಲು ಮತೀಯಭಾವನೆಗಳನ್ನು ಪ್ರಚೋದಿಸಿದಾಗ್ಯೂ, ಜಾಲಿಯನ್‌ವಾಲಾಬಾಗ್ ಇಂದಿಗೂ ಮತೀಯ ಸೌಹಾರ್ಧತೆಗೆ ಸಾಕಾರವಾಗಿ ನಿಂತಿದೆ. ಅಂದು ಸಹಸ್ರಾರು ಜನ ಹಿಂದೂ-ಮುಸ್ಲಿಂ-ಸಿಕ್ ಐಕ್ಯತೆ ಚಿರಾಯುವಾಗಲಿ ಎಂದೆನ್ನುತ್ತ ಸಾವನ್ನಪ್ಪಿದ್ದರು.

ಜಾಲಿಯನ್‌ವಾಲಾಬಾಗ್‌ನಲ್ಲಿ ಹರಿದ ರಕ್ತದ ಹೊಳೆ ದೇಶದ ಸಹಸ್ರಾರು ಯುವಕರನ್ನು ಕೆರಳಿಸಿತು. ಮುಂದಿನ ವರ್ಷಗಳಲ್ಲಿ ಹೋರಾಟಕ್ಕೆ ತೀವ್ರತೆ ಬಂದಿತು.

ಕೊಲೆಪಾತಕ ಜನರಲ್ ಡಾಯರ್‌ನಿಗೆ ಲಂಡನ್ನಿನಲ್ಲಿ 20 ಸಾವಿರ ಪೌಂಡ್ ಹಣ, 'ಬ್ರಿಟಿಶ್ ಸಾಮ್ರಾಜ್ಯದ ರಕ್ಷಕ' ನೆಂಬ ಬಿರುದುಕೊಟ್ಟು ಸನ್ಮಾನಿಸಲಾಯಿತು.

ಜಾಲಿಯನ್‌ವಾಲಾಬಾಗ್ ಇಂದು, ಈ ನಾಡನ್ನು ಪ್ರೀತಿಸಿ ಹುತಾತ್ಮರಾದ ಸಹಸ್ರಾರು ಜನರ ತ್ಯಾಗ ಮತ್ತು ಬಲಿದಾನದ ಪ್ರತೀಕವಾಗಿ ನಿಂತಿದೆ. ಆ ಮಹಾನ್ ಬಲಿದಾನ ವ್ಯರ್ಥವಾಗದಂತೆ ನಿಜವಾದ ಸ್ವಾತಂತ್ರ್ಯವನ್ನು ಪಡೆಯಲು ದೇಶದ ಕಾರ್ಮಿಕ ವರ್ಗ, ಯುವಜನ-ವಿದ್ಯಾರ್ಥಿಗಳು ಸನ್ನದ್ಧರಾಗಬೇಕು. ಆಗ ಮಾತ್ರ ಬಲಿದಾನಕ್ಕೆ ಅರ್ಥ ಬಂದೀತು !

ಜಾಲಿಯನ್‌ವಾಲಾಬಾಗ್ ಹತ್ಯಾಕಾಂಡ ನಡೆದು 63 ವರ್ಷಗಳಾದವು. ನಾವು ಈ ಸಂದರ್ಭದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ನೆತ್ತರನ್ನು ಅರ್ಪಿಸಿದ ಜಾಲಿಯನ್ ವಾಲಾಬಾಗ್‌ನ ಹುತಾತ್ಮರಿಗೆ ಶ್ರದ್ಧಾಂಜಲಿಯನ್ನರ್ಪಿಸುತ್ತೇವೆ.

ಟೆಕ್ಸ್‌ಟಾಯಿಲ್ ಕಾರ್ಮಿಕರ ಬೆಂಬಲಾರ್ಥ

ಏ. ೧೯ ರಂದು ಮಹಾರಾಷ್ಟ್ರ ಬಂದ್

ಏಪ್ರಿಲ್ 2 ರಂದು ಬಾಂಬೆಯ ಶಿವಾಜಿಪಾರ್ಕ್‌ನಲ್ಲಿ ನಡೆದ ಸುಮಾರು 3 ಲಕ್ಷ ಕಾರ್ಮಿಕರ ಬೃಹತ್ ಸಭೆಯಲ್ಲಿ ಟೆಕ್ಸ್‌ಟಾಯಿಲ್ ಕಾರ್ಮಿಕರ ಬೆಂಬಲಾರ್ಥ ಏಪ್ರಿಲ್ 19 ರಂದು ಸಾರ್ವತ್ರಿಕ ಮುಷ್ಕರ ಆಚರಿಸಬೇಕೆಂದು ತೀರ್ಮಾನಿಸಲಾಯಿತು. ಈ ಬೃಹತ್ ಸಭೆಯ ಅಧ್ಯಕ್ಷತೆಯನ್ನು ರಾಜ್ಯ ಸಿ ಐ ಟಿ ಯು ಪ್ರಧಾನ ಕಾರ್ಯದರ್ಶಿ ಕಾಂ॥ ಪಿ. ಕೆ. ಕುರಣಿ ವಹಿಸಿದ್ದರು. ಟೆಕ್ಸ್‌ಟಾಯಿಲ್ ಕಾರ್ಮಿಕರ ಹೋರಾಟದ ಬೆಂಬಲಾರ್ಥವಾಗಿ ರಚಿತವಾದ ಜಂಟೀ ಕ್ರಿಯಾ ಸಮಿತಿಯ ಆಶ್ರಯದಲ್ಲಿ ಸಭೆ ಏರ್ಪಟ್ಟಿತ್ತು,

ಸಭೆಯನ್ನುದ್ದೇಶಿಸಿ ಸಿ ಐ ಟಿ ಯು ರಾಜ್ಯ ಸಮಿತಿಯ ಅಧ್ಯಕ್ಷ ಕಾಂ॥ಎಸ್. ವೈ. ಕೊಲ್ಹಾಟ್‌ಕರ್, ದತ್ತಾ ಸಾಮಂತ, ಜಿ. ವಿ. ಚಿಟ್ನಿಸ್ (ಎ ಐ ಟಿ ಯು ಸಿ). ಯಶವಂತ ಚವ್ಹಾಣ (ಸರ್ವ ಶ್ರಮಿಕ ಸಂಘ), ಕರಾಂಬಶೇಕರ (ಬಿ ಎಂ ಎಸ್), ಪುಷ್ಪಾ ಮೆಹತಾ (ಯು ಟಿ ಯು ಸಿ) ಮತ್ತಿತರರು ಮಾತನಾಡಿದರು. ಎಚ್.ಎಂ.ಎಸ್. ಮಹರಾಷ್ಟ್ರ ಘಟಕವು ಸಾರ್ವತ್ರಿಕ ಮುಷ್ಕರವನ್ನು ಬೆಂಬಲಿಸಿಲ್ಲ.

ಸಿ. ಐ. ಟಿ. ಯು ಸಕ್ರೀಯ ಪಾತ್ರ

ಟೆಕ್ಸ್ ಟಾಯಿಲ್ ಕಾರ್ಮಿಕರ ಹೋರಾಟದ ನೇತೃತ್ವ ದತ್ತಾ ಸಾಮಂತರ ಕೈಯಲ್ಲಿದ್ದರೂ, ಸಿ ಐ ಟಿ ಯು ರಾಜ್ಯ ಘಟಕವು ಈ ಅಭೂತಪೂರ್ವ (ವಿವರ- ಐಕ್ಯರಂಗ ಮಾ 28) ಮುಷ್ಕರವನ್ನು ಬೆಂಬಲಿಸಿದೆ. ಹೋರಾಟದಲ್ಲಿ ಸಕ್ರೀಯವಾಗಿ ಪಾಲ್ಗೊಂಡಿದೆ. ಬಾಂಬೆಯ ಬೇರೆ ಬೇರೆ ಕಡೆ ಸುಮಾರು 20 ಬಹಿರಂಗ ಸಭೆಗಳನ್ನು ಸಿ ಐ ಟಿ ಯು ಏರ್ಪಡಿಸಿತ್ತು. ಮಾರ್ಚ್13 ರಂದು ಜಾಂಬೋರೆ ಮೈದಾನದಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಸಿ ಐ ಟಿ ಯು ಅಧ್ಯಕ್ಷ ಕಾಂ॥ ಬಿ. ಟಿ. ರಣದಿವೆ ಮಾತನಾಡಿದರು. ಟೆಕ್ಸ್‌ಟಾಯಿಲ್ ಕಾರ್ಮಿಕರ ಹೋರಾಟದ ಪರಂಪರೆ, ಐ ಎನ್ ಟಿ ಯು ಸಿಯ ದ್ರೋಹ, ಪ್ರಸಕ್ತ ಹೋರಾಟದ ಸ್ವರೂಪ ಮುಂತಾದ ವಿಷಯವನ್ನು ಕುರಿತು ಕಾಂ॥ ಪಿ. ಕೆ. ಕುರಣಿ ಬರೆದಿರುವ ಕಿರುಹೊತ್ತಿಗೆಯ ಸಹಸ್ರಾರು ಪ್ರತಿಗಳನ್ನು ವಿತರಣೆ ಮಾಡಲಾಗಿದೆ.

ಅತ್ಯಂತ ಗಮನಾರ್ಹವೆಂದರೆ ರಾಜ್ಯದ ರೈತಾಪಿ ಜನ, ಹೋರಾಟ ನಿರತ ಕಾರ್ಮಿಕರಿಗೆ ದೊಡ್ಡ ಪ್ರಮಾಣದಲ್ಲಿ ಧಾನ್ಯ ವಗೈರೆ ಸಹಾಯ ಸಲ್ಲಿಸುತ್ತಿರುವುದು. ಇತ್ತಿಚೆಗೆ ಜರುಗಿದ ಮಹಾರಾಷ್ಟ್ರ ಪ್ರಾಂತ ರೈತ ಸಂಘದ ಸಮ್ಮೇಳನ ಈ ಹೋರಾಟವನ್ನು ಸಂಪೂರ್ಣವಾಗಿ ಬೆಂಬಲಿಸಿದೆ.

ಸಿ ಪಿ ಐ (ಎಂ) ಮತ್ತು ಸಿ ಐ ಟಿ ಯು ಜಂಟೀ ನೇತೃತ್ವದಲ್ಲಿ ಮುಂಬೈಯ ಅಂದೇರಿ, ಬಾಂಡೂಪ್, ಧಾರ್ವಿ ಮತ್ತು ವರ್ಲಿ ಮುಂತಾದ ಸ್ಥಳಗಳಲ್ಲಿ ಮೆರವಣಿಗೆಗಳನ್ನು ನಡೆಸಲಾಗಿತ್ತು. ಹೋರಾಟ ನಿರತ ಕಾರ್ಮಿಕರಿಗೆ ದವಸ, ಧಾನ್ಯ, ಹಣ ಸಂಗ್ರಹ ಮಾಡಲಾಗಿದೆ.

ಮಾರ್ಚ್ 29 ರಂದು ಮುಂಬೈಯಲ್ಲಿ ನಡೆದ ಸಭೆಯನ್ನುದ್ದೇಶಿಸಿ ಸಿ ಐ ಟಿ ಯು ಉಪಾಧ್ಯಕ್ಷ, ಪ. ಬಂಗಾಲ ಮುಖ್ಯ ಮಂತ್ರಿ ಕಾಂ॥ ಜ್ಯೋತಿ ಬಸು ಮಾತನಾಡಿ ಹೋರಾಟವನ್ನು ಬೆಂಬಲಿಸಿದ್ದಲ್ಲದೇ, ಸಿ ಐ ಟಿ ಯು ಪ.ಬಂಗಾಲ ರಾಜ್ಯ ಸಮಿತಿಯ ಪರವಾಗಿ 10,000 ರೂ. ಹಣ ಕಳಿಸುವ ವಾಗ್ದಾನ ನೀಡಿದರು.

ಜನವರಿ 18 ರಿಂದ ಪ್ರಾರಂಭವಾಗಿರುವ ಟೆಕ್ಸ್‌ಟಾಯಿಲ್ ಕಾರ್ಮಿಕರ ಹೋರಾಟ ಜಯಗೊಳ್ಳುವಂತೆ ಮುಂಬೈ ಸಿ ಐ ಟಿ ಯು ಕಾರ್ಯಕರ್ತರು ಅವಿಶ್ರಾಂತವಾಗಿ ಶ್ರಮಿಸುತ್ತಿದ್ದಾರೆ.

ಜಾತೀಯ ದ್ವೇಷದ ಅಪಾಯ ಎಚ್ಚರಿಕೆ !

—ಎನ್. ಕೆ. ಉಪಾಧ್ಯಾಯ

ಕಳೆದ ಕೆಲವು ವರ್ಷಗಳಿಂದ ಹಿನ್ನಡೆಯಾಗಿದ್ದ ಹಿಂದೂ-ಮುಸ್ಲಿಂ ಜಾತೀಯ ದ್ವೇಷದ ಕಿಡಿ ಇತ್ತೀಚೆಗೆ ಕರ್ನಾಟಕ ರಾಜ್ಯದ ಕೆಲವು ಭಾಗಗಳಲ್ಲಿ ಹಾರುತ್ತಿರುವುದು ದುರದೃಷ್ಟಕರ. ಇಂಥ ಪರಿಸ್ಥಿತಿ ಉಂಟಾಗಲಿಕ್ಕೆ ಹಲವಾರು ಕಾರಣಗಳಿವೆ. ಇಂದಿರಾ ಕಾಂಗ್ರೆಸ್ಸಿನ ಬಂಡವಾಳ ಶಾಹಿ ಸರಕಾರದ ಆರ್ಥಿಕ-ರಾಜಕೀಯ ನೀತಿಯಿಂದಾಗಿ ಒಂದೆಡೆ ಬೆಲೆ ಏರಿಕೆ-ಅತಿಪ್ರಸರಣ ಜನರನ್ನು ಕಾಡುತ್ತಿರುವಾಗ, ಮತ್ತೊಂದೆಡೆ ಬಡತನ, ನಿರುದ್ಯೋಗ ಸಮಸ್ಯೆಗಳು ಕ್ಷಯರೋಗದಂತೆ ಸಮಾಜವನ್ನು ಕೊರೆಯುತ್ತಿವೆ. ಎಡ ಮತ್ತು ಪ್ರಜಾಪ್ರಭುತ್ವ ವಿಚಾರಶಕ್ತಿ ಪ್ರಬಲವಾಗಿ ಬೆಳೆಯದಿರುವುದರಿಂದ ಮತೀಯ ಶಕ್ತಿಗಳು ಜನರ-ಯುವಕರ ಅಸಮಾಧಾನದ ದುರುಪಯೋಗಮಾಡಿಕೊಂಡು ಧರ್ಮ ಹಾಗೂ ಜಾತೀಯ ದ್ವೇಷ ಬೆಳೆಸುವುದಕ್ಕೆ ಯುವಶಕ್ತಿಯನ್ನು ಉಪಯೋಗಿಸುತ್ತಿರುವುದನ್ನು ನೋಡುತ್ತಿದ್ದೇವೆ. ಪ. ಬಂಗಾಲ, ತ್ರಿಪುರಾಗಳಲ್ಲಿ ಎಡ ಶಕ್ತಿಗಳು ಬಲಿಷ್ಟವಾಗಿರುವುದರಿಂದ ಅಲ್ಲಿ ಮತೀಯ ಭಾವನೆಯನ್ನು ಬೆಳೆಸಲು, ದುರುಪಯೋಗಪಡಿಸಿಕೊಳ್ಳಲು ಅವಕಾಶವಿಲ್ಲದಿರುವುದನ್ನು ನೋಡುತ್ತಿದ್ದೇವೆ. ಆದರೆ ದೇಶದ ಇತರಡೆಗಳಲ್ಲಿ ಹಾಗಲ್ಲ.

ಇತ್ತೀಚೆಗೆ ಮಹಾರಾಷ್ಟ್ರದ ಪ್ರಮುಖ ಕೇಂದ್ರಗಳಲ್ಲಿ ಹಿಂದೂ—ಮುಸ್ಲಿಂ ಜಗಳ ನಡೆಯಿತು. ಕರ್ನಾಟಕದ ಬಿಜಾಪುರ, ಶೃಂಗೇರಿ, ಬಾಗಲಕೋಟೆ, ರಾಮದುರ್ಗ ಮೊದಲಾದ ನಗರಗಳಲ್ಲಿ ಹಿಂದೂ-ಮುಸ್ಲಿಂಮತೀಯ ಜಗಳಗಳು ಈ ತಿಂಗಳು ನಡೆದವು. ಈ ದ್ವೇಷ ಇತರ ಕಡೆಗಳಲ್ಲೂ ಹಬ್ಬುವುದಿಲ್ಲೆಂದು ಹೇಳಲು ಸಾಧ್ಯವಿಲ್ಲ. ಎರಡೂ ಜಾತಿಯ ಮತೀಯ ಶಕ್ತಿಗಳು ಅಪಪ್ರಚಾರದಲ್ಲಿ ತೊಡಗಿವೆ. ಒಳಸಂಚು ನಡೆಸುತ್ತಿವೆ. ಸಕಾಲದಲ್ಲೇ ಅದನ್ನು ಎದುರಿಸುವುದು ಅತ್ಯಗತ್ಯ.

ಅರಬ ರಾಷ್ಟ್ರಗಳೂ ಹಾಗೆಯೇ ಕರ್ನಾಟಕದಲ್ಲಿರುವ ಕೆಲವು ಸಂಸ್ಥೆಗಳು, ಜಮಾಯತ್ ಇಸ್ಲಾಂ ಮುಸ್ಲಿಂಲೀಗ್‌ಗಳೂ ಮುಸಲ್ಮಾನರಲ್ಲಿ ಧಾರ್ಮಿಕ, ಜಾತಿಯ ಭಾವನೆ ಬೆಳೆಸಲು ಸಾಕಷ್ಟು ಹಣ ಖರ್ಚು ಮಾಡುತ್ತಿವೆ. ಬಿಜಾಪುರ ಜಿಲ್ಲೆಯಲ್ಲಂತೂ ಹಾಳು ಬಿದ್ದಿರುವ ಮಸೀದಿಗಳ ಉದ್ಧಾರ, ಪುನರಚನೆ ನಡೆದಿದೆ. ಅಂಥಲ್ಲಿ ಉತ್ಸವಗಳು ವಿಜೃಂಭಣೆಯಿಂದ ನಡೆಯುತ್ತಿವೆ. ಇತರ ಜಿಲ್ಲೆಗಳಲ್ಲೂ ಇದೇ ರೀತಿ ನಡೆದಿರಬೇಕು. ಗೋಕಾಕ್ ಸಮಿತಿಯ ವರದಿ ಉರ್ದು ಭಾಷೆಯನ್ನು ಸಂಪೂರ್ಣ ನಾಶ ಮಾಡುತ್ತದೆಂದು ಹೇಳಿ ಎಫ್. ಎಂ. ಖಾನರ ಮುಖಂಡತ್ವದಲ್ಲಿ ಮೆರವಣಿಗೆ ನಡೆದ ನಂತರ ರಾಜ್ಯಾದ್ಯಂತ 'ಉರ್ದು ಬಚಾವೊ' ಚಳುವಳಿ ನಡೆಯಿತು. ಬೆಂಗಳೂರಿಗೆ ರಾಜೀವ್ ಗಾಂಧಿ ಬಂದಾಗ ಯುವ ಕಾಂಗ್ರೆ ಮೇಳದಲ್ಲಿ ಎಫ್. ಎಂ. ಖಾನರನ್ನು ಕಡೆಗಣಿಸಲಾಗಿತ್ತು. ತನ್ನ ಬಲ ತೋರಿಸಲು ಗೋಕಾಕ ಸಮಿತಿ ವರದಿಯನ್ನು ಖಾನ್ ಅವರು ಬಹಳ ಸುಲಭದಲ್ಲಿ ಉಪಯೋಗಿಸಿಕೊಂಡರು. ನವಂಬರ್ ತಿಂಗಳಲ್ಲಿ ಸೇರಿದ್ದ ಮಂತ್ರಿಮಂಡಲದ ಸಭೆಯಲ್ಲಿ ಗೋಕಾಕ್ ಸಮಿತಿ ವರದಿಯನ್ನು ಸರಕಾರ ಒಪ್ಪಿಕೊಂಡಿತ್ತು. ರಾಜೀವ್ ಗಾಂಧಿ ಬೆಂಗಳೂರಿಗೆ ಬಂದು ಹೋಗುವ ತನಕ ಎಫ್.ಎಂ.ಖಾನ್ ಅವರಿಗೆ ಗೋಕಾಕ್ ವರದಿಯಿಂದ ಉರ್ದು ಭಾಷೆಗೆ ಅನ್ಯಾಯವಾಗುತ್ತದೆಂಬುದನ್ನು ತಿಳಿದಿರಲಿಲ್ಲವೇನೋ? ಯುವ ಕಾಂಗ್ರೆ ಜಗಳದಿಂದಾಗಿ ತನ್ನ ರಾಜ್ಯ ಸಭೆ ಸದಸ್ಯತ್ವ ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗಿದೆಂದು ಮನಗಂಡ ಖಾನ್, ಮಂತ್ರಿಮಂಡಲದ ಸಭೆಯಲ್ಲಿ ಒಪ್ಪಿಗೆ ಪಡೆದು ಮೂರು ತಿಂಗಳು ಗತಿಸಿದ ನಂತರ ರಾಜಕೀಯ ದುರುದ್ದೇಶಕ್ಕಾಗಿ ಗೋಕಾಕ್ ಸಮಿತಿ ವರದಿಯ ವಿರುದ್ಧ, ರಾಜ್ಯದ ಮುಸಲ್ಮಾನರನ್ನೆಬ್ಬಿಸಿ ಚಳುವಳಿ ಹೂಡಿದರು. ಮುಸ್ಲಿಂ ಲೀಗಿನ ಹಸುರು ಬಣ್ಣದ ಧ್ವಜದಡಿಯಲ್ಲಿ "ನಾರೇ ತಕ್‌ದೀರ ಅಲ್ಲಾ ಹೋ ಅಕ್ಬರ್" ಘೋಷಣೆಗಳೊಡನೆ, ಇಂದಿರಾ ಕಾಂಗ್ರೆಸ್, ಕಾಂಗ್ರೆಸ್ (ಎಸ್) ಜನತಾ-ಹೀಗೆ ಎಂ-ಎಲ್.ಎ., ಎಂ. ಪಿ. ಗಳೆಲ್ಲಾ ಸೇರಿ ಉರ್ದು ಬಚಾವೋ ಮತಪ್ರದರ್ಶನ, ಮೆರವಣಿಗೆ ನಡೆಸಿದರು. ಎಫ್.ಎಂ.ಖಾನ್ ರಾಜ್ಯ ಸಭೆಗೆ ಆರಿಸಿಬಂದರು. 'ಉರ್ದು ಬಚಾವೊ' ಚಳುವಳಿ ಮುಗಿದು ಹೋಯಿತು. ಆದರೆ ಕನ್ನಡ ಭಾಷೆ, ಗೋಕಾಕ್ ವರದಿ ವಿಷಯದಲ್ಲಿ ಮಾತ್ರ ಮುಸಲ್ಮಾನರಲ್ಲಿ ಕಹಿದ್ವೇಷ ಹೆಚ್ಚಾಗಿಯೇ ಉಳಿದಿದೆ. ಆದರಲ್ಲಿ ಗೋಕಾಕ್ ವರದಿ ಓದಿ ತಿಳಿದುಕೊಂಡವರು ಯಾರೂ ಇಲ್ಲ. ಕಾರಣ ದ್ವೇಶದ ವಿಷಬೀಜವನ್ನಷ್ಟೇ ಬಿತ್ತುವುದರಲ್ಲಿ ಯಶಸ್ವಿಯಾಗಿದ್ದಾರೆ.

ಹೀಗೆ ಒಂದು ಕಡೆ ಮುಸಲ್ಮಾನರಲ್ಲಿ ಧರ್ಮ, ಭಾಷೆಗಳ ಕುರಿತು ಪ್ರಚಾರ ನಡೆಯುತ್ತಿರುವಾಗಲೇ, ಮತ್ತೊಂದು ಕಡೆ, ಆರ್.ಎಸ್.ಎಸ್. ಭಾರತೀಯ ಜನತಾ ಪಾರ್ಟಿಯವರು ವಿಶ್ವ ಹಿಂದೂ ಪರಿಷತ್ತಿನ ಹೆಸರಲ್ಲಿ "ಹಿಂದುಗಳೆಲ್ಲ ಒಂದಾಗಿರಿ. ಮುಸಲ್ಮಾನರನ್ನು ಪಾಕಿಸ್ತಾನಕ್ಕೆ ಓಡಿಸಿರಿ" ಎಂಬ ಘೋಷಣೆಗಳೊಡನೆ, ಹಿಂದೂ ಧರ್ಮ, ಜಾತಿಯ ಕುರಿತು ಜನಜಾಗರಣೆ ಕಾಯಕ್ರಮ ತುರುಸಿನಿಂದ ಪ್ರಾರಂಭ ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ ವಿಶ್ವ ಹಿಂದೂ ಪರಿಷತ್ತಿನ ಜನಜಾಗರಣ ಕಾರ್ಯಕ್ರಮ ನಡೆಯುತ್ತಿರುವಾಗಲೇ ಹಲವಾರು ಕಡೆ ಜಾತೀಯ ದಂಗೆ ನಡೆಯಿತು. ಕರ್ನಾಟಕದಲ್ಲಿಯೂ ಇವರ ಕಾರ್ಯಕ್ರಮ ಕಳೆದ 3 ತಿಂಗಳಿಂದ ಒಂದೇ ಸಮನೆ ನಡೆಯುತ್ತಲೇ ಇದೆ. "ಉರ್ದು ಬಚಾವೋ" ಚಳುವಳಿ ಯಾವ ರೀತಿಯಲ್ಲಿ ಮುಸಲ್ಮಾನರನ್ನು ಆಕರ್ಷಿಸುತ್ತಿದೆಯೋ ಹಾಗೆಯೇ "ಹಿಂದುಗಳೆಲ್ಲ ಒಂದಾಗಿರಿ" ಎಂಬ ಘೋಷಣೆಗೆ ಹಿಂದುಗಳು ಆಕರ್ಷಿಸಲ್ಪಡುತ್ತಿದ್ದಾರೆ. ಮುಸಲ್ಮಾನರು ಟಿಪ್ಪು ಸೈನ್ಯದ ಹೆಸರಲ್ಲಿ ಯುವಕರಿಗೆ ಲಾಟಿ ಆಟ ಕಲಿಸುತ್ತಿದ್ದರೆ, ಆರ್.ಎಸ್.ಎಸ್.ನವರು ಹಿಂದೂಗಳಿಗೆ ಲಾಟಿ ಮತ್ತು ಕರಾಟೆ ಕಲಿಯುತ್ತಿದ್ದಾರೆ.

ಬಿಜಾಪುರದಲ್ಲಿ ಒಬ್ಬರು ಹಿಂದುಗಳಿಗಷ್ಟೇ ಕರಾಟೆ ಕಲಿಸುತ್ತಿರುವುದನ್ನು ಕಂಡು, ತಮಗೂ ಕಲಿಸಬೇಕೆಂದು ಮುಸಲ್ಮಾನ ಯುವಕರು ಕೇಳಿಕೊಂಡಾಗ ಜಾತೀಯ ಕಲಹ ನಡೆದು ದಂಗೆಯಾಯಿತು. ಹೀಗೆ ಕ್ಷುಲ್ಲಕ ಕಾರಣಗಳಿಂದಾಗಿ ಜಾತೀಯ ಕಲಹ ನಡೆಯುತ್ತಿದೆ. ದಂಗೆಯಾಗುತ್ತಿದೆ. ಹಿಂದೂ-ಮುಸಲ್ಮಾನ ಎರಡೂ ಜಾತಿಯಲ್ಲಿರುವ ಜಾತೀವಾದಿಗಳೂ-ಸಮಾಜ ದ್ರೋಹಿಗಳೂ ಇದಕ್ಕೆ ಮುಖ್ಯ ಕಾರಣ. ಇಂಥವರ ಜಗಳದಿಂದಾಗಿ ನಿರಪರಾಧಿಗಳು ಪೆಟ್ಟು ತಿನ್ನಬೇಕಾಗಿದೆ, ಹಾನಿಗೊಳಗಾಗಬೇಕಾಗಿದೆ.

ಬಿಜಾಪುರ ಜಿಲ್ಲೆಯಲ್ಲಿ, ನಗರದಲ್ಲಿ ಕಳೆದೆರಡು ವರ್ಷಗಳಿಂದಲೂ ಇಂಥ ಘಟನೆ ನಡೆದಾಗ ಪೋಲೀಸ್ ಅಧಿಕಾರಿಗಳೇ ಅಂಥ ಗುಂಡಾಜನರಿಗೆ ಪ್ರೋತ್ಸಾಹ ಕೊಡುತ್ತಿರುವುದು ಕಂಡು ಬಂದಿದೆ. ಪೋಲೀಸ್ ಅಧಿಕಾರಿಗಳನ್ನು ವರ್ಗ ಮಾಡಬೇಕೆಂದು ಎಲ್ಲ ವಿರೋಧಿ ಪಕ್ಷಗಳು ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ. ಹೋದ ವಾರ ಬಿಜಾಪುರದಲ್ಲಿ ನಡೆದ ದಂಗೆಯಿಂದಾಗಿ, ಎಲ್ಲ ರಾಜಕೀಯ ಮತ್ತು ಇತರ ಸಂಘ-ಸಂಸ್ಥೆಗಳ ಶಾಂತಿ ಕಮಿಟಿ ಸೇರಿದಾಗ, ಜಿಲ್ಲಾಧಿಕಾರಿಗಳನ್ನೂ, ಜಿಲ್ಲಾ ಪೋಲೀಸ್ ಅಧಿಕಾರಿಗಳನ್ನೂ ವರ್ಗ ಮಾಡಲೇಬೇಕೆಂದೂ, ಗುಂಡಾಗಿರಿ, ಕಳವು, ಮತೀಯ ಜಗಳಕ್ಕೆಲ್ಲ ಈ ಅಧಿಕಾರಿಗಳೇ ಮುಖ್ಯಕಾರಣವೆಂಬ ಅಭಿಪ್ರಾಯ ವ್ಯಕ್ತವಾಯಿತು. ಕಾಂಗ್ರೆಯ ಎಂ.ಪಿ, ಮತ್ತು ಎಂ.ಎಲ್.ಎ.ಗಳೂ ಈ ಸಭೆಯಲ್ಲಿದ್ದರು.

ಗೋಕಾಕ್ ಸಮಿತಿ ಪರ-ವಿರುದ್ಧ ಚಳುವಳಿ, ವಿಶ್ವ ಹಿಂದೂ ಪರಿಷತ್ತಿನ ಜನಜಾಗರಣ ಕಾರ್ಯಕ್ರಮ, ಆರ್.ಎಸ್.ಎಸ್. ಚಟುವಟಿಕೆಗಳು, ಹಿಂದೂ-ಮುಸ್ಲಿಂ ಜಾತೀ ದ್ವೇಷ ಬೆಳೆಸಲಿಕ್ಕೆ ಕಾರಣಭೂತವಾಗಿದೆ. ಗುಂಡೂರಾವ್ ಸರಕಾರದ ಅಸಮರ್ಪಕ ಆಡಳಿತೆ ಇದಕ್ಕೆ ಪ್ರತ್ಯಕ್ಷವಾಗಿ ಸಹಾಯವಾಗಿದೆ. ಗೋಕಾಕ್ ಸಮಿತಿಯ ವರದಿಯನ್ನು ಅಭ್ಯಾಸಮಾಡಿ ಅಲ್ಪ ಭಾಷಕರಿಗೆ ಅದನ್ನು ತಿಳಿಸಿ ಹೇಳಿ, ಗೋಕಾಕ್ ಸಮಿತಿಯಿಂದ ಉರ್ದು ಮತ್ತಿನ್ನಿತರ ಭಾಷಕರಿಗೆ ಅನ್ಯಾಯವಾಗುವುದಿಲ್ಲ. ಯಾವದೇ ರೀತಿ ಅನ್ಯಾಯವಾದರೆ ಅದನ್ನು ಎಲ್ಲರೂ ಕೂಡಿ ಸರಿಪಡಿಸಲು ಪ್ರಯತ್ನಿಸೋಣವೆಂದು ತಿಳಿ ಹೇಳುವ ಗೋಜಿಗೂ ಯಾರೂ ಹೋಗದೆ, ಸಮಾಜ ದ್ರೋಹಿಗಳಿಗೆ ಅಪ್ರತ್ಯಕ್ಷ ರೀತಿಯಲ್ಲಿ ಸಹಾಯ ಮಾಡಿದಂತಾಗಿದೆ. ಮಾರ್ಕ್ಸವಾದಿ ಕಮ್ಯುನಿಸ್ಟ ಪಾರ್ಟಿ, ಭಾರತ ಕಮ್ಯುನಿಸ್ಟ ಪಾರ್ಟಿಗಳು ಬೆಳೆಯುತ್ತಿರುವ ಇಂಥ ಆಂದೋಳನದ ಅಪಾಯವನ್ನು ಸಕಾಲದಲ್ಲೇ ಕಂಡು ಹಿಡಿದು, ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳ ಜೊತೆಯಲ್ಲಿ ಅದನ್ನೆದುರಿಸಲು ಬೇಕಾದ ತಯಾರಿ ಮಾಡಬೇಕಾಗಿದೆ. ಹಿಂದೂ-ಮುಸ್ಲಿಂ ಜಾತೀಯ ಶಕ್ತಿಗಳು ಕಾಂಗ್ರೆ ಸರಕಾರದ ಜನ ವಿರೋಧಿ ನೀತಿಯ ವಿರುದ್ಧ ನಡೆಸಲ್ಪಡಬೇಕಾದ ಹೋರಾಟ ದಿಶೆಯನ್ನು ಜಾತೀಯ ಜಗಳಕ್ಕೆ ಉಪಯೋಗಿಸುತ್ತಿರುವುದನ್ನು ತಪ್ಪಿಸುವದು ಅತ್ಯವಶ್ಯ.

ಇಂದಿರಾ ಗಾಂಧಿಯ ಸರ್ವಾಧಿಶಕ್ತಿಯ ವಿರುದ್ಧ ಹೋರಾಟವನ್ನು, ಗುಂಡೂರಾವ್ ಸರಕಾರದ ಜನ ವಿರೋಧಿ, ರೈತ ಕಾರ್ಮಿಕ ವಿರೋಧಿ ಆಡಳಿತೆಯ ವಿರುದ್ಧ ನಡೆಸಬೇಕಾದ ಚಳುವಳಿಯನ್ನೆಲ್ಲ, ಗೋಕಾಕ್ ಸಮಿತಿ ಪರ-ವಿರುದ್ಧ, ವಿಶ್ವ ಹಿಂದೂ ಪರಿಷತ್, ಉರ್ದು ಬಚಾವೋ ಚಳುವಳಿಗಳೆಲ್ಲ ಮಂಗಮಾಯ ಮಾಡಿಸಿ, ಅನಾವಶ್ಯಕ ಸಮಸ್ಯೆಗಳತ್ತ ಜನರ ದೃಷ್ಟಿಯನ್ನು ಹರಿಸಲು ಪ್ರಯತ್ನ ಮಾಡುವುದನ್ನು ತಡೆಗಟ್ಟುವುದು ಅತ್ಯಗತ್ಯ. ಈ ದಿಶೆಯಲ್ಲಿ ಕಾರ್ಯ ಪ್ರವೃತ್ತರಾಗೋಣ.

ಆಂಧ್ರದಲ್ಲಿ

ಯುದ್ಧ ವಿರೋಧಿ ಸಮ್ಮೇಳನ

ಸಾಮ್ರಾಜ್ಯಶಾಹಿಗಳ ಯುದ್ಧ ಪಿಪಾಸೆಯ ವಿರುದ್ಧ ಬಲವಾದ ಜನಾಭಿಪ್ರಾಯ ಮೂಡಿಸಿ, ಜಾಗೃತಿಯನ್ನುಂಟುಮಾಡಬೇಕೆಂಬ ಸಿ. ಪಿ. ಐ. (ಎಂ) ವಿಜಯವಾಡ ಅಧಿವೇಶನದ ಠರಾವಿನ ಅನುಗುಣವಾಗಿ ಆಂಧ್ರ ಪ್ರದೇಶದ ಸಿ. ಪಿ. ಐ. (ಎಂ) ರಾಜ್ಯ ಘಟಕವು ಹೈದರಾಬಾದ್‌ನಲ್ಲಿ ಮಾರ್ಚ 28 ರಂದು ಯುದ್ಧ ವಿರೋಧಿ (Anti War) ಸಮ್ಮೇಳನವನ್ನೇರ್ಪಡಿಸಿತ್ತು.

ರಾಜ್ಯದ ಎಲ್ಲ ಜನವಿಭಾಗಗಳಿಂದ 1394 ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಖ್ಯಾತ ಶಿಕ್ಷಣವೇತ್ತರು, ಪ್ರಾಧ್ಯಾಪಕರು, ನ್ಯಾಯವಾದಿಗಳು, ಡಾಕ್ಟರುಗಳು, ಕಲಾವಿದರು, ಪತ್ರಿಕಾಕರ್ತರು ಇವರಲ್ಲಿ ಸೇರಿದ್ದರು.

ಸಿ.ಪಿ.ಐ. (ಎಂ) ರಾಜ್ಯ ಘಟಕದ ಕಾರ್ಯದರ್ಶಿ ಕಾಂ! ಪಿ. ಸುಂದರಯ್ಯ ಸಮ್ಮೇಳನವನ್ನು ಉದ್ಘಾಟಿಸಿದರು. ಆರಂಭದಲ್ಲಿ ಪ್ರತಿನಿಧಿಗಳನ್ನು ಸ್ವಾಗತಿಸಿದ ಕಾಂ! ಎನ್. ಪ್ರಸಾದ್‌ರಾವ್ ಅವರು ಮಾತನಾಡುತ್ತಾ, ಅಮೇರಿಕನ್ ಸಾಮ್ರಾಜ್ಯಶಾಹಿಗಳ ಯುದ್ಧಕೋರ ನೀತಿಯನ್ನು ಬಲವಾಗಿ ಖಂಡಿಸಿದರು. ಪಾಕೀಸ್ತಾನದ ಮಿಲಿಟರಿ ಆಡಳಿತಕ್ಕೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಿ ಭಾರತ ಉಪಖಂಡದಲ್ಲಿ ಯುದ್ಧ ಭೀತಿ ಉಂಟುಮಾಡಿದ್ದಷ್ಟೇ ಅಲ್ಲ, ಭಾರತದಲ್ಲಿ ಸಂಕುಚಿತ ಪ್ರಾಂತೀವಾದಿ, ಮತೀಯವಾದಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತದೆ ಎಂದರು.

ಕಾಂ! ಸುಂದರಯ್ಯ ಮಾತನಾಡುತ್ತಾ ಜಗತ್ತಿನಾದ್ಯಂತ ನಡೆಯುತ್ತಿರುವ ಸಾಮ್ರಾಜ್ಯಶಾಹಿಗಳ ಕುತಂತ್ರವನ್ನು ಬಯಲಿಗೆಳೆದರು. ಸ್ವತಂತ್ರ ರಾಷ್ಟ್ರಗಳಲ್ಲಿ ಸಾಮ್ರಾಜ್ಯಶಾಹಿಗಳ ಹಸ್ತಕ್ಷೇಪ ನಿಲ್ಲಿಸಲು ಬಲವಾದ ಜನಾಭಿಪ್ರಾಯ ಮೂಡಿಸಲು ಕೇವಲ ಸಿ.ಪಿ.ಐ. (ಎಂ) ನಿಂದ ಮಾತ್ರ ಸಾಧ್ಯವಿಲ್ಲ, ಎಲ್ಲ ಜನವಿಭಾಗಗಳೂ ಜೊತೆಗೂಡಿ ಶ್ರಮಿಸಬೇಕೆಂದು ಕಾಂ! ಪಿ. ಎಸ್. ತಿಳಿಸಿದರು.

ಸಮ್ಮೇಳನವನ್ನುದ್ದೇಶಿಸಿ ಪ್ರೊ! ಆರ್. ವಿ. ಆರ್. ಚಂದ್ರಶೇಖರರಾವ್, ಮಾಜೀ ಕೇಂದ್ರ ಮಂತ್ರಿ ರಘುನಾಥ ರೆಡ್ಡಿ, ಪ್ರಜಾಶಕ್ತಿ ದೈನಿಕದ ಸಂಪಾದಕ ಕಾಂ! ಎಂ. ಹನುಮಂತರಾವ್, ಆಂಧ್ರ ವಿಶ್ವವಿದ್ಯಾಲಯ ರೀಡರ್ ಟಿ. ವೆಂಕಟೇಶ್ವರಲು, ಖ್ಯಾತ ಪತ್ರಕರ್ತ ಎನ್. ವೆಂಕಟೇಶ್ವರರಾವ್ ಮೊದಲಾದವರು ಮಾತನಾಡಿದರು.

ಎಲ್ಲ ಪ್ರಜಾಪ್ರಭುತ್ವ ಪ್ರೇಮಿಗಳು, ಪ್ರಗತಿಪರರು ಜೊತೆಗೂಡಿ, ಭಾರತ ಸರಕಾರವು ಸಾಮ್ರಾಜ್ಯಶಾಹಿ ವಿರೋಧಿ ವಿದೇಶಧೋರಣೆ ಅನುಸರಿಸಲು ಒತ್ತಾಯಿಸುವಂತೆ ಸಮ್ಮೇಳನ ಘೋಷಿಸಿತು.

ಕೊನೆಯಲ್ಲಿ ಆಂಧ್ರ ಪ್ರಜಾನಾಟ್ಯ ಮಂಡಳಿ ವತಿಯಿಂದ "ನ್ಯೂಟ್ರಾನ್ ಬಾಂಬ್" ಎಂಬ ಕಿರುನಾಟಕ ಪ್ರದರ್ಶನ ಏರ್ಪಡಿಸಲಾಗಿತ್ತು.

ಚಿಲಿದೇಶದಲ್ಲಿ ಹೋರಾಟ

—ಅಮೇರಿಕೋ ಜೊರಿಲ್ಲಾ

ಇತ್ತೀಚೆಗೆ ದಕ್ಷಿಣ ಅಮೇರಿಕಾ ಖಂಡದ ದೇಶವಾದ ಚಿಲಿಯ ಕಮ್ಯುನಿಸ್ಟರು ತಮ್ಮ ಪಕ್ಷದ 60ನೇ ವಾರ್ಷಿಕೋತ್ಸವವನ್ನು ಆಚರಿಸಿದರು. ಈ ಸಂದರ್ಭದಲ್ಲಿ ಚಿಲಿ ದೇಶದಲ್ಲಿ ನಡೆದು ಬಂದ ಹೋರಾಟದ ಸಂಕ್ಷಿಪ್ತ ವಿವರಗಳನ್ನುಳ್ಳ ಈ ಲೇಖನವನ್ನು ಇಲ್ಲಿ ಕೊಡಲಾಗಿದೆ. ಇದು ಚಿಲೀ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ರಾಜಕೀಯ ಆಯೋಗದ ಸದಸ್ಯರಾದ ಅಮೇರಿಕೋ ಜೊರಿಲ್ಲಾರವರ ಲೇಖನದ ಸಾರಾಂಶ.

ಚಿಲಿಯಲ್ಲಿ ಕಾರ್ಮಿಕ ವರ್ಗದ ಚಳವಳಿ, ವಿಶೇಷವಾಗಿ ಮುಷ್ಕರ ಕಾರ್ಯಾಚರಣೆಗಳು ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಗಿಂತಲೂ ಮೊದಲೇ ಆರಂಭವಾಗಿದ್ದವು. 1912ರಿಂದಲೇ ನಮ್ಮಲ್ಲಿ 'ಸಮಾಜವಾದೀ ಕಾರ್ಮಿಕರ ಪಕ್ಷ'ವಿದ್ದು ಕಾರ್ಮಿಕ ವರ್ಗಕ್ಕೆ ರಾಜಕೀಯ ಶಿಕ್ಷಣ ನೀಡುವಲ್ಲಿ ಅದು ಮಹತ್ವದ ಕೆಲಸ ಮಾಡಿತ್ತು.

ಕೇವಲ ಮುಷ್ಕರಗಳಿಂದ ಸಾಮಾಜಿಕ ನ್ಯಾಯ ಪಡೆಯಲು ಸಾಧ್ಯವಿಲ್ಲವೆಂದು ಚಿಲಿಯ ದುಡಿಯುವ ಜನತೆ ಕಂಡುಕೊಂಡುದರ ಹಿನ್ನೆಲೆಯಲ್ಲಿ 1921ರ ಡಿಸೆಂಬರ್ ಅಂತ್ಯದಲ್ಲಿ ಜರುಗಿದ 'ಸಮಾಜವಾದೀ ಕಾರ್ಮಿಕರ ಪಕ್ಷ'ದ ನಾಲ್ಕನೇ ಅಧಿವೇಶನ 1922ರ ಜನವರಿ 2 ರಂದು 'ಕಮ್ಯುನಿಸ್ಟ್ ಪಕ್ಷ' ಎಂದು ಹೆಸರು ಬದಲಿಸಿಕೊಳ್ಳಲು ಹಾಗೂ ಕಮ್ಯುನಿಸ್ಟ್ ಅಂತರ್‌ರಾಷ್ಟ್ರೀಯವನ್ನು ಸೇರಲು ನಿರ್ಧರಿಸಿತು. ಮುದ್ರಕನ ವೃತ್ತಿಯ ಲೂಯೀ ಎಮಿಲಿಯೋ ರಿಕಾಬಾರೆನ್ ಈ ರೀತಿ ಸ್ಥಾಪನೆಗೊಂಡ ಕಮ್ಯುನಿಸ್ಟ್ ಪಕ್ಷದ ಸಂಘಟನಾತ್ಮಕ ಹಾಗೂ ಸೈದ್ಧಾಂತಿಕ ಒಗ್ಗಟ್ಟಿಗಾಗಿ ಅವಿರತ ದುಡಿದರು. ನಮ್ಮ ನಾಯಕರಾಗಿ ಹಾಗೂ ಕಾರ್ಮಿಕ ವರ್ಗದ ಶಿಕ್ಷಕನಾಗಿ ಅವರ ಹೆಸರು ನಮ್ಮ ಇತಿಹಾಸದಲ್ಲಿ ಚಿರಸ್ಥಾಯಿಯಾಗಿದೆ.

ಅಲ್ಲಿಂದೀಚೆಗೆ ಮಾರ್ಕ್ಸ್‌ವಾದ – ಲೆನಿನ್‌ವಾದದ ಮಾರ್ಗದರ್ಶನದಲ್ಲಿ ಚಿಲಿ ಕಮ್ಯುನಿಸ್ಟ್ ಪಕ್ಷ ಹಲವು ಘಟ್ಟಗಳನ್ನು ದಾಟಿ ಬಂದಿದೆ. ಈ ಪ್ರಯಾಣದಲ್ಲಿ ಅದು ಹಲವು ಗೆಲುವುಗಳನ್ನೂ ಪಡೆಯಿತು. ಕೆಲವು ಸೋಲುಗಳನ್ನು ಅನುಭವಿಸಿತು. ಹಲವು ವರ್ಷ ಪಕ್ಷ ಗುಪ್ತ ಚಟುವಟಿಕೆಗಳನ್ನು ನಡೆಸಬೇಕಾಗಿ ಬಂತು. ಆರ್ತುರೋ ಅಲೆಸಾಂಡ್ರಿಯಾನ ದಮನಕಾರೀ ಆಡಳಿತ ಕಾಲದಲ್ಲಿ (1932-38) ಚಿಲೀ ಕಮ್ಯುನಿಸ್ಟರು, ಸಮಾಜವಾದಿಗಳು, ತೀವ್ರಗಾಮಿಗಳು ಹಾಗೂ ಇತರ ಪಕ್ಷಗಳುಳ್ಳ ವಿಶಾಲ ರಾಜಕೀಯ ಕೂಟ ಅಥವಾ ಒಂದು ಜನಪ್ರಿಯ ರಂಗ ಕಟ್ಟುವ ಕೆಲಸ ಆರಂಭಿಸಿದರು. ಈ ಶಕ್ತಿಗಳ ಜಂಟೀ ಕಾರ್ಯಾಚರಣೆಯ ಫಲವಾಗಿ 1938ರ ಅಧ್ಯಕ್ಷೀಯ ಚುನಾವಣೆಯಲ್ಲಿ ಈ ರಂಗದ ಅಭ್ಯರ್ಥಿ ಪೆಡ್ರೋ ಅಗ್ನೀರಿ ಸೆರಡಾ ಚುನಾಯಿತರಾದರು.

ಚಿಲಿಯ ಮೊದಲ ಕ್ರಾಂತಿ

50ರ ದಶಕದಲ್ಲಿ ದೇಶದ ಪ್ರಜಾಪ್ರಭುತ್ವೀಕರಣ, ಭೂಸುಧಾರಣೆಗಾಗಿ ಮತ್ತು ಸ್ವಕೀಯವಾಗಿ ಕೇವಲ ಕೆಲವೇ ಜನರ ಏಕಾಧಿಕಾರ ಹಾಗೂ ವಿದೇಶೀ ಗುತ್ತೇದಾರಿಗಳ ವಿರುದ್ಧ ಪರಿಣಾಮಕಾರೀ ಹೋರಾಟ ನಡೆಸಲು ಸಾಧ್ಯವಾಗುವಂತೆ ವಿವಿಧ ಪಕ್ಷಗಳ ಕೂಟ ರಚಿಸುವ ಕಾರ್ಯದಲ್ಲಿ ತೊಡಗಿದೆವು. ಫಲವಾಗಿ 1969ರಲ್ಲಿ ಜನಪ್ರಿಯ ಐಕ್ಯತೆಯೆಂಬ ಹೆಸರಿನ ಮೈತ್ರಿಕೂಟ ರಚನೆಗೊಂಡಿತು. ಮರುವರ್ಷ ಈ ಕೂಟದ ಅಭ್ಯರ್ಥಿ ಸಾಲ್ವಡೋರ್ ಅಲೆಂಡೆ ಅಧ್ಯಕ್ಷೀಯ ಚುನಾವಣೆ ಗೆದ್ದರು. ವಾಸ್ತವದಲ್ಲಿ ಇದು ಚಿಲಿಯ ಮೊದಲ ಕ್ರಾಂತಿಯ ಆರಂಭ.

''ಜನಪ್ರಿಯ ಐಕ್ಯತೆ'' ರಂಗದ ಸರಕಾರ ಅಧಿಕಾರದಲ್ಲಿದ್ದ ಮೂರು ವರ್ಷಗಳಲ್ಲಿ ತೀವ್ರಗಾಮೀ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತಂದಿತು. ದೇಶದ ಸ್ವಾಭಾವಿಕ ಸಂಪತ್ತು, ತಾಮ್ರ ಹಾಗೂ ಕಬ್ಬಿಣದ ಅದುರಿನ ಗಣಿಗಳ ಹಾಗೂ ಕಲ್ಲುಪ್ಪು ಮತ್ತು ಸಿಮೆಂಟ್ ಕೈಗಾರಿಕೆಗಳಲ್ಲಿನ ದೊಡ್ಡ ಸಂಸ್ಥೆಗಳನ್ನು ರಾಷ್ಟ್ರೀಕರಿಸಲಾಯ್ತು. 70 ಅತೀ ದೊಡ್ಡ ಗುತ್ತೇದಾರಿಗಳು, ದೇಶದ 18 ವ್ಯಾಪಾರೀ ಬ್ಯಾಂಕುಗಳಲ್ಲಿ 16 ರಾಷ್ಟ್ರದ ಸ್ವತ್ತಾದವು. ರಪ್ತು ವ್ಯಾಪಾರದಲ್ಲಿ 90% ಆಮದಿನಲ್ಲಿ 60% ಸರಕಾರೀ ನಿಯಂತ್ರಣಕ್ಕೆ ಬಂತು. 60 ಲಕ್ಷ ಹೆಕ್ಟೇರ್ ಕೃಷಿಯೋಗ್ಯ ಭೂಮಿಯನ್ನು ವಶಪಡಿಸಿಕೊಂಡು ರೈತರಲ್ಲಿ ಹಂಚಿತು. ವಿದೇಶೀ ಧೋರಣೆಗಳಲ್ಲೂ ಮೂಲಭೂತ ಬದಲಾವಣೆಗಳಾದವು. ಕ್ಯೂಬಾದೊಂದಿಗೆ ಅಧಿಕಾರ ವಹಿಸಿಕೊಂಡ ಮರುದಿನದಿಂದಲೇ ಸಂಬಂಧ ಏರ್ಪಡಿಸಲಾಯಿತು. ಜರ್ಮನ್ ಗಣತಂತ್ರದೊಂದಿಗೆ ರಾಯಭಾರ ಸಂಬಂಧ ಏರ್ಪಡಿಸಿಕೊಂಡ ಲ್ಯಾಟಿನ್ ಅಮೇರಿಕಾ ದೇಶಗಳಲ್ಲಿ ಚಿಲೀ ಎರಡನೇಯದು. ಮೊದಲನೇಯದು ಕ್ಯೂಬಾ.

ಅಲೆಂಡೆ ಅಧ್ಯಕ್ಷ ಕಾಲದ ಈ ಎಲ್ಲಾ ಕ್ರಾಂತಿಕಾರೀ ಕಾರ್ಯಕ್ರಮಗಳು ಸ್ವಾಭಾವಿಕವಾಗಿಯೇ ಬಹುರಾಷ್ಟ್ರೀಯ ಸಂಸ್ಥೆಗಳ ಹಿತಾಸಕ್ತಿಗೆ ಕೊಡಲಿಯೇಟುಗಳಾಗಿದ್ದವು. ಚಿಲಿಯ ಮೇಲೆ ಯಜಮಾನಿಕೆ ನಡೆಸುತ್ತಿದ್ದ ಸಂಸ್ಥೆಗಳವು. ಆದ್ದರಿಂದಲೇ, ಆರಂಭದಿಂದಲೇ ಅಲೆಂಡೇ ಸರಕಾರದ ವಿರುದ್ಧ ವಾಷಿಂಗ್ಟನ್‌ನಲ್ಲಿ ಪಿತೂರಿಗಳನ್ನು ಹೆಣೆಯಲಾಗುತ್ತಿತ್ತು. 1970ರ ಸೆಪ್ಟೆಂಬರ್ 11 ರಂದು ಅಮೇರಿಕಾದ ಬಹುರಾಷ್ಟ್ರೀಯ ಸಂಸ್ಥೆಗಳು, ಸಿ.ಐ.ಎ. ಹಾಗೂ ಹೆನ್ರಿ ಕಿಸಿಂಜರ್ ವೈಯಕ್ತಿಕವಾಗಿ ನಡೆಸಿದ ಕುತಂತ್ರದ ಪರಿಣಾಮವಾಗಿ 'ಜನಪ್ರಿಯ ಐಕ್ಯತೆ'ಯ ಸರಕಾರ ಉರುಳಿಸಲ್ಪಟ್ಟು ಅಲೆಂಡೆಯವರ ಅಮಾನುಷ ಹತ್ಯೆಯಾಯಿತು.

ಫ್ಯಾಸಿಸಂನ ಕರಾಳರಾತ್ರಿ

ಚಿಲಿ ಇತಿಹಾಸದ ಅತೀ ಭಯಾನಕ ಅವಧಿ ಅಂದಿನಿಂದ ಆರಂಭ. ಕಮ್ಯುನಿಸ್ಟ್ ಪಕ್ಷದ ಮೇಲೆ ತೀವ್ರ ದಮನ ಕ್ರಮಗಳೂ ಆರಂಭವಾದವು. ಅಧಿಕಾರ ಕಿತ್ತುಕೊಂಡ ಸರ್ವಾಧಿಕಾರೀ ಪಿನೋಚೆಟ್‌ನ ಆಡಳಿತದ ಪ್ರಮುಖ ಉದ್ದೇಶಗಳಲ್ಲೊಂದು ಕಮ್ಯುನಿಸ್ಟರನ್ನು ಹಾಗೂ ಎಲ್ಲಾ ಮಾರ್ಕ್ಸ್‌ವಾದಿಗಳನ್ನು ಧ್ವಂಸ ಮಾಡುವುದು. ಆದರೆ ಫ್ಯಾಸಿಸಂನ ಈ ಕರಾಳರಾತ್ರಿಯಲ್ಲೂ ಪಕ್ಷದ ಚಟುವಟಿಕೆಗಳು ಕ್ಷಣ ಮಾತ್ರಕ್ಕೂ ನಿಲ್ಲಲಿಲ್ಲ. ಈಗ ಈ ಸರ್ವಾಧಿಕಾರಿಯ ವಿರುದ್ಧ ಹೋರಾಡುತ್ತಿರುವವರಲ್ಲಿ ಕಮ್ಯುನಿಸ್ಟರೊಂದಿಗೆ ಜನಪ್ರಿಯ ಐಕ್ಯರಂಗದ ಎಲ್ಲಾ ಪಕ್ಷಗಳು, ಎಡ ಕ್ರಾಂತಿಕಾರೀ ಚಳವಳಿ ಹಾಗೂ ಕ್ರಿಶ್ಚಿಯನ್ ಡೆಮೋಕ್ರೇಟ್‌ಗಳು ಹೀಗೆ ಎಲ್ಲರೂ ಸೇರಿದ್ದಾರೆ.

ಪಿನೋಚೆಟ್ ಸರ್ವಾಧಿಕಾರ ಆರಂಭವಾದ ಪ್ರಾರಂಭದಲ್ಲೇ ಅಕ್ಟೋಬರ್ 1973ರಲ್ಲಿ ಪಕ್ಷ ತನ್ನ ಪ್ರಥಮ ಹೇಳಿಕೆ ನೀಡಿ ಈ ಸರ್ವಾಧಿಕಾರೀ ಆಡಳಿತದ ಫ್ಯಾಸಿಸ್ಟ್ ಸ್ವಭಾವದ ಬಗ್ಗೆ ಅದನ್ನು ಎದುರಿಸಿ ಚಿಲಿಯನ್ನು ವಿಮೋಚನೆಗೊಳಿಸಲು ಪ್ರಜಾಪ್ರಭುತ್ವವಾದೀ ಶಕ್ತಿಗಳ ಏಕತೆಯ ಅಗತ್ಯದ ಬಗ್ಗೆ ಒತ್ತಿ ಹೇಳಿತ್ತು. ಆದರೆ ಆಗ ಇನ್ನೂ ಬಹಳ ಜನಕ್ಕೆ ನಡೆದಿರುವ ದುರಂತದ ಪ್ರಮಾಣ ಎಷ್ಟೆಂಬುದರ ಅರಿವಾಗಿರಲಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ. ಆ ಪ್ರಥಮ ಹೇಳಿಕೆಯ ವಿಚಾರ ಹಾಗೂ ಕಾರ್ಯಕ್ರಮಗಳನ್ನೇ ಮುಂದುವರಿಸಿ ಆ ಮೂಲಕ ಪಿನೋಚೆಟ್ 1980ರಲ್ಲಿ ನಡೆಸಿದ ಜನಮತ ಗಣನೆ ಕೇವಲ ಮೋಸವೆಂಬುದನ್ನು ನಾವು ಬಯಲು ಮಾಡಿದ್ದೇವೆ. ಆದ್ದರಿಂದ ಈ ಪರಿಸ್ಥಿತಿಯಲ್ಲಿ ಜನತೆ ದಂಗೆಯೇಳುವುದೊಂದೇ ಸ್ವಾತಂತ್ರ್ಯ ಪಡೆಯಲು ಇರುವ ಮಾರ್ಗ ಎಂದು ಕಮ್ಯುನಿಸ್ಟರು ತೋರಿಸಿಕೊಟ್ಟಿದ್ದಾರೆ. ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಲೂಯಿ ಕೋರ್ವಲನ್ ಹೇಳಿರುವಂತೆ "ಫ್ಯಾಸಿಸ್ಟ್ ಆಡಳಿತ ಜನತೆಗೆ ಬೇರೇನೂ ದಾರಿಯಿಲ್ಲದಂತೆಮಾಡಿ ದಂಗೆಯೇಳುವುದು ಜನತೆಯ ಹಕ್ಕು ಎಂಬುದು ನಿರ್ವಿವಾದ ಅಂಶ ಎಂದೂ ಎಲ್ಲರೂ ಒಪ್ಪುವ ಪರಿಸ್ಥಿತಿಯನ್ನು ಅದೇ ಸೃಷ್ಟಿಸಿದೆ.''

ವಾರ್ಷಿಕೋತ್ಸವ ಆಚರಿಸುವ ಈ ಸಂದರ್ಭದಲ್ಲಿ ನಮ್ಮ ಪಕ್ಷದ 60 ವರ್ಷಗಳ ಅನುಭವ ನಮಗೆ ಹೋರಾಟದ ಪ್ರೇರಣೆಯಾಗಿದೆ. ಪಿನೋಚೆಟ್ ಸರ್ವಾಧಿಕಾರಿ ತಾನಾಗಿ ಅಧಿಕಾರ ಬಿಡುವುದಿಲ್ಲ. ಅವನನ್ನು ಅಧಿಕಾರದಿಂದ ಎಳೆದುಹಾಕಬೇಕೆಂದು ಎಲ್ಲಾ ವಿರೋಧ ಪಕ್ಷಗಳು ನಿರ್ಧರಿಸಿವೆ. ಈ ವಾಸ್ತವ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ನಾವು ಮುಂದುವರಿಯುತ್ತೇವೆ.

ಕಾರ್ಮಿಕರ ನಿರ್ಭಯ ಹೋರಾಟ

ಹೆಚ್ಚೆಚ್ಚು ಕಾರ್ಮಿಕರು ದಮನದ ಭಯವನ್ನು ಮೀರಿನಿಂತು ಹೊಸ ಹೊಸ ರೀತಿಯ ಹೋರಾಟಕ್ಕಿಳಿಯುತ್ತಿದ್ದಾರೆ. ತಮ್ಮ ತಕ್ಷಣದ ಮಹತ್ವಪೂರ್ಣವಾದ ಬೇಡಿಕೆಗಳಾಗಿ ಹೋರಾಡುತ್ತಾ ಅದೇ ಸಮಯದಲ್ಲಿ ತಮ್ಮ ವಿಮೋಚನೆಯೆಡೆಗೆ ಮುಂದುವರಿಯುತ್ತಿದ್ದೇವೆಯೆಂಬ ಅರಿವು ಅವರಲ್ಲಿ ಮೂಡುತ್ತಿದೆ. ಕಳೆದ ವರ್ಷ 'ಎಲ್ ತೆನಿಯೆಂಟೇ' ಗಣಿಗಳಲ್ಲಿ ಸಾವಿರಾರು ಕಾರ್ಮಿಕರು ನಡೆಸಿದ ಮುಷ್ಕರ ಒಂದು ಉದಾಹರಣೆ. ಈ ಕಾರ್ಮಿಕರ ಸಭೆಗಳಲ್ಲಿ ಚರ್ಚೆ ಆರ್ಥಿಕ ಬೇಡಿಕೆಗಳನ್ನು ಮೀರಿ ನಿಂತು ಗಂಭೀರ ರಾಜಕೀಯ ಸಮಸ್ಯೆಗಳ ಚರ್ಚೆಗಳೂ ನಡೆಯಲಾರಂಭಿಸಿದವು. ಪೋಲೀಸ್‌ರೊಂದಿಗೆ ತಿಕ್ಕಾಟಗಳೂ ನಡೆದವು. ವಿದ್ಯಾರ್ಥಿಗಳು ಹಾಗೂ ಗಣಿ ಕಾರ್ಮಿಕರ ನಡುವೆ ಸಂಯುಕ್ತ ಕಾರ್ಯಾಚರಣೆಯ ಒಪ್ಪಂದವಾಯಿತು. ನಂತರ ವೃತ್ತಿನಿರತರು ಹಾಗೂ ಅಂಗಡಿಯವರೂ ಇದರಲ್ಲಿ ಸೇರಿಕೊಂಡು ಚಳವಳಿ ವ್ಯಾಪಕ ರೂಪ ಪಡೆಯಿತು. ಈ ಮುಷ್ಕರ ಚಿಲೀ ದುಡಿಯುವ ಜನತೆಯ ಹೋರಾಟಗಳಲ್ಲಿ ಒಂದು ಹೊಸ ಘಟ್ಟ. ಇದರ ನಂತರ ನಡೆದ ಬಂದರು ಕೆಲಸಗಾರರ ಹಾಗೂ ಕಲ್ಲಿದ್ದಲು ಗಣಿ ಕಾರ್ಮಿಕರ ಮುಷ್ಕರ ಚಿಲೀ ಕಾರ್ಮಿಕಲ್ಲಿ ವರ್ಗ ಪ್ರಜ್ಞೆಯ ಬೆಳವಣಿಗೆ ಹಾಗೂ ಹೋರಾಟಗಳಿಗೆ ಅವರು ತಯಾರಾಗಿದ್ದಾರೆಂಬುದನ್ನು ತೋರಿಸಿಕೊಟ್ಟಿದೆ.

ಈ ಬೆಳವಣಿಗೆಗಳಲ್ಲಿ ಕಂಡುಬಂದ ಒಂದು ಹೊಸ ಅಂಶವೆಂದರೆ ಮುಷ್ಕರಕಾರರ ಹೆಂಡಂದಿರು, ಹೆಣ್ಣು ಮಕ್ಕಳು, ತಂಗಿಯರು ಹೆಚ್ಚೆಚ್ಚಾಗಿ ಅವುಗಳಲ್ಲಿ ಸಕ್ರಿಯವಾಗಿ ಭಾಗವಹಿಸಲಾರಂಭಿಸಿದ್ದಾರೆ. ಉದಾಹರಣೆಗೆ ಸಾನ್ ಅಂತೋನಿಯೋದಲ್ಲಿ ಮುಷ್ಕರನಿರತ ಬಂದರು ಕೆಲಸಗಾರರ ಸಭೆಯಲ್ಲಿ ಒಬ್ಬ ತರುಣಿ ಬಂದು ಸಭೆಯಲ್ಲಿ ಭಾಗವಹಿಸಲು ಅನುಮತಿ ಕೇಳಿದಳು. ''ನನಗೆ ಇಲ್ಲಿರುವ ಹಕ್ಕು ಇದೆ ಫ್ಯಾಸಿಸ್ಟರ್ ಗುಂಡಿಗೆ ಬಲಿಯಾದ ನನ್ನ ತಂದೆಯ ಸ್ಥಾನವನ್ನು ನಾನು ತಗೊಳ್ಳಬಯಸುತ್ತೇನೆ'' ಎಂದಳಾಕೆ.

ಸಾಮ್ರಾಜ್ಯಶಾಹಿಯ ವಿರುದ್ಧ

ದಿನದಿಂದ ದಿನಕ್ಕೆ ಪ್ರತಿರೋಧ ಹೊಸ ಹೊಸ ರೂಪ ತಳೆಯುತ್ತಿದೆ. ನಮ್ಮ ಸಂಗಾತಿಗಳು ಈ ಒಂದು ಘಟನೆಯನ್ನು ಹೇಳುತ್ತಾರೆ. ರಾಜಧಾನಿ ಸಾಂಟಿಯಾಗೋದಲ್ಲಿ ಪರಾಗ್ವೇ ಹಾಗೂ ಚಿಲೀ ರಾಷ್ಟ್ರೀಯ ಟೀಮುಗಳ ನಡುವೆ ಪುಟ್‌ಬಾಲ್ ಪಂದ್ಯದ ಮಧ್ಯದಲ್ಲಿ ವಿದ್ಯುತ್ ತೊಂದರೆಯಿಂದಾಗಿ ಹತ್ತು ನಿಮಿಷ ಕತ್ತಲಾವರಿಸಿ ಮತ್ತೆ ಬೆಳಕು ಬರುವಷ್ಟರಲ್ಲಿ ಅಂಟೋನಿಮೋ ಮೈದಾನಾರನ್ನು ಬಿಡುಗಡೆಗೊಳಿಸಬೇಕೆಂದು ಒತ್ತಾಯಿಸಿ ಸ್ಟ್ರಾಸ್‌ನರ್ ಹಾಗೂ ಪಿನೋಚೆಟ್ ಸರ್ವಾಧಿಕಾರಿಯನ್ನು ಖಂಡಿಸುವ ಸಾವಿರಾರು ಕರಪತ್ರಗಳು ಸ್ಟೇಡಿಯಂನ ಎಲ್ಲೆಡೆ ಕಾಣಿಸಿಕೊಂಡವು.

ಪಿನೋಚೆಟ್‌ನ ವಿರುದ್ಧ ಹೋರಾಟ ಅಮೇರಿಕನ್ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟವೂ ಕೂಡಾ ಎಂಬುದನ್ನು ಚಿಲೀ ಜನತೆ ಅರಿತುಗೊಳ್ಳುತ್ತಿದ್ದಾರೆ. ಅಮೇರಿಕನ್ ಸಾಮ್ರಾಜ್ಯಶಾಹಿ ಈ ಸರ್ವಾಧಿಕಾರಿಯನ್ನು ಬೆಂಬಲಿಸುತ್ತಿದೆ. ಹಾಗೂ ಈತ ದೇಶದ ಸ್ವಾಭಾವಿಕ ಸಂಪತ್ತನ್ನು ಅಮೇರಿಕಾದ ಬಂಡವಾಳಶಾಹಿಗಳಿಗೆ ಮಾರಿಕೊಂಡಿದ್ದಾನೆ. ಈತನ ವಿರುದ್ಧ ಹೋರಾಡುತ್ತಿರುವ ದೇಶಪ್ರೇಮೀ ಶಕ್ತಿಗಳ ಮುಂಚೂಣಿಯಲ್ಲಿ ಚಿಲಿಯ ಎಲ್ಲಾ ದುಡಿಯುವ ಜನತೆಯ ಹಿತಾಸಕ್ತಿಗಳಿಗಾಗಿ ಹೋರಾಡುವ ಚಿಲೀ ಕಮ್ಯುನಿಸ್ಟ್ ಪಕ್ಷವಿದೆ. ಮಾರ್ಕ್ಸ್‌ವಾದ–ಲೆನಿನ್‌ವಾದದ ಹಾದಿಯಲ್ಲೇ ಮುಂದುವರಿಯುತ್ತಿರುವ ಈ ಪಕ್ಷ ಅರವತ್ತು ವರ್ಷಗಳ ವರ್ಗ ಹೋರಾಟದಿಂದ ದೃಢಗೊಂಡಿದೆ.

ಹಲ್ಲೆಯ ಖಂಡನೆ

5-4-82 ರಂದು, ಪ್ರಾಂತ ರೈತ ಸಂಘದ ಕರೆಯ ಮೇರೆಗೆ ನಡೆದ ಪ್ರತಿಭಟನಾ ದಿನಾಚರಣೆಯ ದಿನದಂದು ಪ್ರಾಂತ ರೈತ ಸಂಘದ ಉಪಾಧ್ಯಕ್ಷ ಕಾಂ| ಲಕ್ಷ್ಮಯ್ಯ, ಕಾಂತರಾಜ್ ಮತ್ತಿತರರ ಮೇಲೆ ಕೋರ್ಟು ಅತಿಕ್ರಮ ಪ್ರವೇಶದ ಆಪಾದನೆ ಹೊರಿಸಿ ಬಂಧಿಸಿದನ್ನು ಡಿ.ವೈ.ಎಫ್.ಐ. ಕೋಲಾರ ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸಿದೆ. ಅಧಿಕಾರಿಗಳ ಈ ದುರ್ವರ್ತನೆಯ ಕುರಿತು ವಿಚಾರಣೆ ನಡೆಸಿ ಕ್ರಮತೆಗೆದುಕೊಳ್ಳಬೇಕೆಂದು ಡಿ. ವೈ. ಎಫ್. ಐ. ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ| ಕೆ. ವಿ. ಸತ್ಯನಾರಾಯಣ ಒತ್ತಾಯಿಸಿದ್ದಾರೆ.

ಮತಾಂತರದಿಂದ ಸಮಾನತೆ ಸಾಧ್ಯವೆ ?

(ಕಳೆದ ಸಂಚಿಕೆಯಿಂದ ಮುಂದುವರಿದದು)

—ಜನಕರಾಜ

ಬೌದ್ಧ ಧರ್ಮ ಮತ್ತು ದಲಿತರು

ಅಂಬೇಡ್ಕರ್ ಹಿಂದೂ ಧರ್ಮವನ್ನು ತ್ಯಜಿಸಬೇಕು ಎಂದು ನಿರ್ಧರಿಸಿದಾಗ ಅವರಿಗೆ ಯಾವ ಧರ್ಮವನ್ನು ಸೇರಬೇಕು ಎನ್ನುವ ಪ್ರಶ್ನೆ ಎದುರಾಗುತ್ತದೆ. 'ಯೆಹೋಲಾ' ಸಮ್ಮೇಳನದಲ್ಲಿ ತೆಗೆದುಕೊಂಡಿದ್ದ ನಿರ್ಣಯಗಳನ್ನು ಜಾರೀ ಮಾಡುವ ಸಂಬಂಧವಾಗಿ 1936ರ ಮೇ 30 ಮತ್ತು 31 ರಲ್ಲಿ ಬಾಂಬೆಯ ದಾದರ್‌ನಲ್ಲಿ ಸಮ್ಮೇಳನವೊಂದು ಸೇರುರಿತ್ತು. ಅಂಬೇಡ್ಕರ್ ತಮ್ಮ ಭಾಷಣದಲ್ಲಿ, ನೀವು ಎಲ್ಲಿಯವರೆಗೆ ಹಿಂದೂ ಬಂಧನದಲ್ಲಿರುವಿರೊ ಅಲ್ಲಿಯವರೆಗೆ ನಿಮಗೆ ಮುಕ್ತಿಯೇ ಇಲ್ಲ. ನಿಜವಾದ ಧರ್ಮವೊಂದು ವ್ಯಕ್ತಿಯ ಏಳಿಗೆಯ ಕಾರ್ಯ ಮಾಡುತ್ತದೆ. ಆದರೆ ಹಿಂದೂ ಧರ್ಮ ವ್ಯಕ್ತಿ ವ್ಯಕ್ತಿಗಳ ನಡುವೆ ಪ್ರೀತಿ, ಸಮಾನತೆ, ಸ್ವಾತಂತ್ರ್ಯಗಳನ್ನು ಬೆಳೆಸಿಕೊಳ್ಳುವ ಗುಣಗಳನ್ನು ಕಲಿಸಿಲ್ಲ. ಮತ್ತು ದಲಿತರಿಗೆ ಅನುಕೂಲವಾದ ವಾತಾವರಣವನ್ನು ನಿರ್ಮಿಸುವಲ್ಲಿ ಹಿಂದೂ ಧರ್ಮ ಸೋತಿದೆ. ಆದುದರಿಂದ ಹಿಂದೂ ಮುಷ್ಟಿಯಿಂದ ತಪ್ಪಿಸಿಕೊಂಡು ಬೇರೊಂದು ಧರ್ಮದ ಆಸರೆ ಪಡೆಯುವುದು ಅನಿವಾರ್ಯವಾಗಿದೆ ಎನ್ನುತ್ತಾರೆ. ಸಮ್ಮೇಳನವು, ಹಿಂದೂ ದೇವರುಗಳ ಪೂಜೆ, ಹಿಂದೂ ಹಬ್ಬಗಳಾಚರಣೆ ಮತ್ತು ಹಿಂದೂಗಳ ಯಾತ್ರಾಸ್ಥಳಗಳಿಗೆ ಭೇಟಿಕೊಡುವುದನ್ನು ನಿಲ್ಲಿಸಬೇಕೆಂದು ಮಹರ್ ಜನಾಂಗವನ್ನು ಒತ್ತಾಯಿಸುತ್ತದೆ. ಅಂಬೇಡ್ಕರ್ ಅವರು ಮತಾಂತರ ಅಸ್ಪೃಶ್ಯರನ್ನು ಸಾಮಾಜಿಕ ಬಂಧನದಿಂದ ಬಿಡುಗಡೆ ಮಾಡಿ ಆರ್ಥಿಕ ಪ್ರಗತಿಗೆ ಅನುವು ಮಾಡಿಕೊಡುತ್ತದೆ ಎನ್ನುತ್ತಾರೆ. ಆ ಸಮ್ಮೇಳನದಲ್ಲಿ ಯಾವ ಧರ್ಮ ಸೇರಬೇಕೆನ್ನುವುದು ಚರ್ಚೆಯಾಗುವುದಿಲ್ಲ.

ಹಿಂದೂ ಧರ್ಮ ತ್ಯಜಿಸಿ ಯಾವ ಧರ್ಮ ಸೇರಬೇಕೆನ್ನುವ ವಿಷಯವಾಗಿ ಅಂಬೇಡ್ಕರ್ ಬಹಳವಾಗಿ ಯೋಚಿಸುತ್ತಾರೆ. ಕ್ರೈಸ್ತ ಧರ್ಮವನ್ನಾಗಲಿ ಅಥವಾ ಇಸ್ಲಾಂ ಧರ್ಮವನ್ನಾಗಲಿ ಅವರು ಸೇರಬಯಸುವುದಿಲ್ಲ. ಶೋಷಿತ ವರ್ಗ ಆ ಧರ್ಮಗಳನ್ನು ಸೇರಿದರೆ ಅವರು ಹಿಂದೂ ಧರ್ಮದ ಹೊರಗೆ ಹೋಗುವುದಲ್ಲದೆ ಹಿಂದೂ ಸಂಸ್ಕೃತಿಯಿಂದ ದೂರವಾಗುವುದನ್ನು ತಪ್ಪಿಸಲು ಮೊದಲು "ಸಿಖ್" ಧರ್ಮವನ್ನು ಸೇರುವಂತೆ ಬಯಸುತ್ತಾರೆ. ಬೇರೆ ಆಚಾರ ಮತ್ತು ವಿಚಾರಗಳನ್ನೊಳಗೊಂಡ ಧರ್ಮಗಳಿಗೆ ಅಸ್ಪೃಶ್ಯರು ಹೊಂದಿಕೊಳ್ಳುವ ಕಷ್ಟವನ್ನು ಅಂಬೇಡ್ಕರ್ ಅರಿತಿದ್ದರು.

ತಮ್ಮ ಅನುಯಾಯಿಗಳಿಗೆ ಹಿಂದೂ ಧರ್ಮವನ್ನು ತ್ಯಜಿಸಿ ಬೇರೊಂದು ಧರ್ಮವನ್ನು ಸ್ವೀಕರಿಸುವಂತೆ ಕರೆ ಕೊಟ್ಟಿದ್ದರೂ ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ಪ್ರಭಾವಿತರಾಗಿದ್ದರು. ಬೌದ್ಧ ಧರ್ಮದ ನೆರಳು ಅವರ ಮೇಲೆ ಸುಳಿದಾಡುತ್ತಿರುತ್ತದೆ. ಬಾಲ್ಯದಿಂದಲೂ ಅವರಿಗೆ ಬೌದ್ಧ ಧರ್ಮದ ಬಗ್ಗೆ ಶ್ರದ್ಧೆ ಇರುತ್ತದೆ ಮತ್ತು ಬುದ್ಧನನ್ನು ತಮ್ಮ ಉಪದೇಶಕನೆಂದೇ ನಂಬಿರುತ್ತಾರೆ. ಅವರು ತಮ್ಮ ಭಾಷಣದಲ್ಲಿ, ಬ್ರಾಹ್ಮಣ ಮತ್ತು ಬೌದ್ಧ ಧರ್ಮಗಳ ಮಧ್ಯೆ ನಡೆದ ಹೋರಾಟ ಮತ್ತು ಬೌದ್ಧ ಧರ್ಮದ ವಿರುದ್ಧ ಬ್ರಾಹ್ಮಣರು ನಡೆಸಿದ ಪ್ರತಿಕ್ರಾಂತಿಯನ್ನು ವಿವರಿಸುತ್ತಿದ್ದರು. 1944ರ ನವೆಂಬರ್‌ನಲ್ಲಿ ನಡೆದ ಪೂನಾ ಸಭೆಯಲ್ಲಿ ಅವರು ಮಾತನಾಡುತ್ತಾ, ಹಿಂದಿನ ಕಾಲದಲ್ಲಿ ಬರೆದ ವೇದ ಮತ್ತು ಪ್ರತಿ ಧರ್ಮ ಪುಸ್ತಕವು, ರಾಜಕೀಯ ಪುಸ್ತಕವೂ ಆಗಿದೆ. ವೇದ ಮತ್ತು ಬ್ರಾಹ್ಮಣವಾದವನ್ನು ಉಚ್ಚ ಮಟ್ಟಕ್ಕೇರಿಸುವ ಗುರಿಯನ್ನಿಟ್ಟುಕೊಂಡಿರುವ 'ಗೀತಾ'ವನ್ನು ರಾಜಕೀಯ ಪುಸ್ತಕವೆಂದೇ ಅಭಿಪ್ರಾಯಪಡಬೇಕು ಎಂದರು.

ಅಂಬೇಡ್ಕರ್ ಹಿಂದೂ ಧರ್ಮದಲ್ಲಿರುವ ದೇವ ಮಾನವರನ್ನು ವಿರೋಧಿಸಿ, ಬೌದ್ಧ ಧರ್ಮ ನೀತಿ ಧರ್ಮಗಳ ಮೇಲೆ ನಿಂತಿದೆ ಎನ್ನುತ್ತಾರೆ. ಅಲ್ಲಿ ಬುದ್ಧನು ದೇವ ಮಾನವ ಅಥವಾ ದೇವರು ಹಾಗಿಲ್ಲದೆ ಮಾರ್ಗದರ್ಶಿಯಾಗಿದ್ದಾನೆ. ಕೃಷ್ಣ ದೇವರ ದೇವ ನಾನೆಂದು ಹೇಳಿಕೊಂಡರೆ ಕ್ರಿಸ್ತ ನಾನು ದೇವರ ಮಗನೆಂದು ಮತ್ತು ಮಹಮದ್ ಪೈಗಂಬರ್ ನಾನು ದೇವರ ಕೊನೆಯ ದೂತನೆಂದು ಹೇಳಿಕೊಂಡಿದ್ದಾನೆ. ಬುದ್ಧನನ್ನು ಬಿಟ್ಟರೆ ಉಳಿದ ಮತ ಸ್ಥಾಪಕರು ತಾವೇ ಮೋಕ್ಷದಾತರೆಂದು ನಂಬಿದ್ದಾರೆ, ಆದರೆ ಬುದ್ಧ ಮಾರ್ಗದಾತನಾಗಿಯಷ್ಟೆ ತೃಪ್ತಿಗೊಂಡಿದ್ದಾನೆಂದು ಅಭಿಪ್ರಾಯಪಡುತ್ತಾರೆ. ಸಾಮಾಜಿಕ ಅಸಮಾನತೆ ಹಿಂದೂ ಧರ್ಮದ್ದಾದರೆ, ಸಮಾನತೆಯು ಬೌದ್ಧ ಧರ್ಮದ ಮಂತ್ರ ಎನ್ನುತ್ತಾರೆ. ಮನುಷ್ಯ ಮತ್ತು ದೇವರ ನಡುವಿನ ಸಂಬಂಧವನ್ನು ಕಲ್ಪಿಸುವುದು ಬೇರೆಯ ಧರ್ಮಗಳ ಉದ್ದೇಶವಾದರೆ, ದೇವರೇ ಇಲ್ಲದೆ ಮನುಷ್ಯ ಮನುಷ್ಯನ ನಡುವಿನ ಸಂಬಂಧ ಕಲ್ಪಿಸುವುದು ಬೌದ್ಧ ಧರ್ಮದ ಉದ್ದೇಶವಾಗಿದೆ ಎನ್ನುತ್ತಾರೆ. ಈ ಎಲ್ಲ ಅಂಶಗಳು ಅಂಬೇಡ್ಕರ್ ಬೌದ್ಧ ಧರ್ಮ ಸ್ವೀಕಾರ ಮಾಡಲು ಕಾರಣವಾಗುತ್ತವೆ.

ಈ ನೆಲದ ಸಂಸ್ಕೃತಿ ಮತ್ತು ಇತಿಹಾಸದಿಂದ ದೂರ ಉಳಿಯಲು ಅಂಬೇಡ್ಕರ್ ಇಷ್ಟಪಡುವುದಿಲ್ಲ. ಅವರ ಮಾತಿನಲ್ಲಿ ಹೀಗೆ ಹೇಳುತ್ತಾರೆ:

"Buddism is a part and parcel of Bharatiya enthure. I have taken care that my conversion will not harm the tradition of the enthure and the history of this land"

ಹಿಂದೂ ಧರ್ಮದಲ್ಲಿ ದಲಿತರ ಮೇಲಾಗುತ್ತಿರುವ ದಬ್ಬಾಳಿಕೆ ದೌರ್ಜನ್ಯವನ್ನು ವಿರೋಧಿಸಿ ಧರ್ಮವನ್ನೇ ತ್ಯಜಿಸಿ, ಮಾನವೀಯ ಮೌಲ್ಯಗಳನ್ನೊಳಗೊಂಡ ಬೌದ್ಧ ಧರ್ಮಕ್ಕೆ ಅಂಬೇಡ್ಕರ್ ಮತಾಂತರಗೊಂಡಿದ್ದು ಅಶ್ಚರ್ಯವೇನಲ್ಲ. ಆದರೆ ಬೌದ್ಧ ಧರ್ಮದಲ್ಲೂ ದಲಿತರು ಸಮಾನತೆಯನ್ನು ಕಂಡರೆ? ಇದನ್ನು ಗಮನಿಸಿದಾಗ ಮಾನವೀಯ ಮೌಲ್ಯದ ಮತವೊಂದರ ಹುಡುಕಾಟ ಪ್ರಾರಂಭಿಸಿದ ಡಾ. ಅಂಬೇಡ್ಕರ್ ಬೌದ್ಧ ಧರ್ಮವನ್ನು ಸ್ವಲ್ಪ ಮೇರೆ ಮೀರಿಯೇ ಪ್ರಶಂಸಿಸಿದ್ದಾರೆ ಎನಿಸುತ್ತದೆ

ಈ ಮೇಲಿನ ಎಲ್ಲಾ ಧರ್ಮಗಳಲ್ಲಿಯೂ ದಲಿತರನ್ನು ಸಮಾನವಾಗಿ ಕಂಡು ಸಮಾನ ಸ್ಥಾನ ನೀಡುತ್ತಿಲ್ಲ. ಅಲ್ಲಿಯೂ ದಲಿತರು ಸೆಳೆಯಲು ಪ್ರಯತ್ನಿಸುತ್ತಲೇ ಇವೆ. ಮತ್ತು ಸಮಾನವಾಗಿ ಕಾಣುವ ಮಾತಿನ ಬೊಬ್ಬೆ ಹೊಡೆಯುತ್ತಲೇ ಇವೆ. ಈ ಸಂದರ್ಭದಲ್ಲಿ ದಲಿತರು ಆ ಮಾತಿನ ಬೊಬ್ಬೆಯೊಡೆಯುವ ಧರ್ಮಗಳ ಜಾತಕಗಳನ್ನು ಜಾಲಾಡಬೇಕಾಗಿದೆ. ಒಂದು ಧರ್ಮ ತನ್ನ ಉಳಿವು ಮತ್ತು ಉನ್ನತಿಗಾಗಿ ಮತ್ತೊಂದು ಧರ್ಮದ ವಿರುದ್ಧ ಕತ್ತಿ ಮಸೆಯುತ್ತಲೇ ಇದೆ. ವಿಶ್ವ ಶಾಂತಿ, ಪ್ರೀತಿ ಮತ್ತು ಸಮಾನತೆಯನ್ನು ಭೋಧಿಸುವ ಧರ್ಮಗಳು ನಡೆಸಿದ ನರಮೇಧಗಳೆಷ್ಟು? ವಿಚಾರ ಬೇಧ ಹೊಂದಿದ್ದವರನ್ನ ದಮನ ಮಾಡಿ, ಮುಗ್ಧ ಜನರನ್ನು ಬೆಂಕಿಗೆಸೆದು ಜೀವಂತ ಸುಡುತ್ತಿರುವುದು ಇವರ ಬಾಯಿ ಮಾತಿನ ಬೊಬ್ಬೆಗೆ ಉತ್ತಮ ನಿದರ್ಶನಗಳು. ಕೊಲೆ ಸುಲಿಗೆಯಲ್ಲಿ ಯಾವ ಧರ್ಮವೂ ಹಿಂದುಳಿದಿಲ್ಲ. ಧರ್ಮದ ಹೆಸರಿನಲ್ಲಿ ಹೆಂಗಸರ ಮಾನ ಹಾನಿ ಮಕ್ಕಳ ಮತ್ತು ವೃದ್ಧರ ಹಾನಿಗಳು ನಿಂತೂ ಇಲ್ಲ.

ಮತ ಧರ್ಮಗಳು ವೈರವನ್ನು ಕಲಿಸುತ್ತವೆ, ಇದಕ್ಕೆ ಹಿಂದಿನ ಹಾಗು ಇಂದಿನ ಇತಿಹಾಸ ಪುಟಗಳು ಮುಗ್ಧ ಜನರ ರಕ್ತದಿಂದ ಕೆಂಪಾಗಿ ಕಪ್ಪು ಕತೆ ಹೇಳುತ್ತಿರುವುದೇ ಸಾಕ್ಷಿ. ರಾಜಕೀಯ ಹೊಲದಲ್ಲಿ ಧರ್ಮ ಗೊಬ್ಬರವಾಗುತ್ತದೆ. ಮುಗ್ಧ ಜನರ ರಕ್ತವ ಚೆಲ್ಲಿ ಭಂಡವಾಳದ ಬೀಜ ಬಿತ್ತಿ ಹುಲುಸಾದ ಬೆಳೆ ಬೆಳೆಯುತ್ತಾರೆ. ಮುಗ್ಧ ಜನ ಅವರು ಹೇಳುವ ದಯೆ, ಶಾಂತಿ, ಪ್ರೀತಿ ಮತ್ತು ಸಮಾನತೆಯ ಮಾತನ್ನು ನಂಬಿ ಧರ್ಮದ ತಾಳಕ್ಕೆ ಕುಣಿಯುವ ಬೊಂಬೆಗಳಾಗುತ್ತಾರೆ. ಧರ್ಮದ ಹೆಸರಿನಲ್ಲಿ ತಮ್ಮ ಸಹೋದರ–ಸಹೋದರಿಯರ ಪ್ರಾಣವನ್ನೂ ತೆಗೆದು ಕೊನೆಗೆ ತಾವೂ ಬಲಿಯಾಗುತ್ತಾರೆ. ಮತ ಧರ್ಮಗಳ ಈ ಕಾಯಿಲೆ ಸ್ವಾಭಾವಿಕವಾದದ್ದು. ಎಲ್ಲಾ ಧರ್ಮಗಳ ಶೋಷಿತ ಜನ ಒಕ್ಕೂಡಿ ಮತ ಧರ್ಮಗಳ ಮೃತ್ಯುಕಾಣಿಸದೆ ಬೇರೆ ವಿಧಿ ಇಲ್ಲ. ಇಲ್ಲದೆ ಹೋದಲ್ಲಿ ಸಮಾನತೆಯ ಹೂ ಅರಳುವುದಿಲ್ಲ.

ಹಿಂದೂಧರ್ಮದ ಕ್ರೂರ ಅಮಾನವೀಯ ವರ್ತನೆಗೆ ಸಿಕ್ಕಿ ಉಸಿರುಕಟ್ಟಿದ ಜನ ಉಸಿರಾಡಲು ಬೇರೆ ಮತ ಧರ್ಮಗಳನ್ನು ಹುಡುಕುತ್ತಿದ್ದಾರೆ. ಆದರೆ ಮತ ಬದಲಾದರೆ ಶೋಷಣೆಯ ಮುಖ ಬದಲಾಗದು ಎನ್ನುವ ನಗ್ನ ಸತ್ಯವನ್ನು ಇತಿಹಾಸ ಸಾರಿ ಹೇಳುತ್ತಿದೆ. ಹಿಂದೂ ಧರ್ಮದ ಬುಡ ಅಲುಗಾಡಲು ಪ್ರಾರಂಭಿಸಿದಾಗ ಜಾತೀವಾದಿಗಳು ಪುನರ್ ಮತಾಂತರಗೊಳ್ಳಿ ಮತ್ತು ಮತಾಂತರಗೊಳ್ಳಬೇಡಿ ಎಂದು ಬೊಬ್ಬೆ ಹೊಡೆಯುತ್ತಿವೆ. ದಲಿತರ ಮೇಲೆ ನಿರಂತರ ಜಾತೀ ಶೋಷಣೆಯ ಹೊರೆಯನ್ನು ಹೊರಿಸಿ, ಬೆಲ್ಚಿ ಮುಂತಾದ ಕಡೆಗಳಲ್ಲಿ ಜೀವಂತ ಸುಟ್ಟ ಜಾತೀವಾದಿ ಹಿಂದೂಗಳಿಗೆ ದಲಿತರ ಮತಾಂತರದ ಬಗ್ಗೆ ಮಾತಾಡಲು ಯಾವ ನೈತಿಕ ಹಕ್ಕಿದೆ?

ಕೆಲವು ಮಠಾಧಿಪತಿಗಳು ದಲಿತರನ್ನೆಲ್ಲಾ ದತ್ತು ತೆಗೆದುಕೊಳ್ಳಲು ಮುಂದಾಗಿವೆ. ದಲಿತರು ಇವರಿಗೆಲ್ಲ ಸರಕೇನು? ಇವು ಒಂದು ಕಡೆಯಾದರೆ, ಪುನರ್ ಮತಾಂತರಗೊಳ್ಳಿ ಎನ್ನುವ ನೀವು ದಲಿತರನ್ನೆಲ್ಲಾ ಬ್ರಾಹ್ಮಣರಾಗಿ ಪರಿವರ್ತಿಸುವಿರೇನು ಎಂದು ಪ್ರಶ್ನಿಸುವ ದಲಿತ ಧ್ವನಿಗಳು ಇವೆ. ಯಾವ ಪುರೋಹಿತ ಶಾಹಿ ಸಂಸ್ಕೃತಿ ಶತಮಾನಗಳಿಂದಲೂ ದಲಿತರನ್ನ ಅದುಮಿಟ್ಟು ಉಸಿರು ಕಟ್ಟಿಸಿದೆಯೊ ಆ ವಾದವನ್ನೇ ಒಪ್ಪಿದ ವಿಪರ್ಯಾಸವಾಗುತ್ತದೆ. ಬ್ರಾಹ್ಮಣರಾಗಿ ಪರಿವರ್ತನೆಗೊಂಡ ದಲಿತರು ದಲಿತ ಬ್ರಾಹ್ಮಣರಾದರೆ ಆಶ್ರರ್ಯವಿಲ್ಲ. ಅಲ್ಲದೆ ದಲಿತರೂ ಶೋಷಕರ ಸಾಲಿನಲ್ಲಿ ನಿಂತಂತಾಗುತ್ತದೆ. ದಲಿತರು ಶೋಷಕರ ಸಾಲಿನಲ್ಲಿ ನಿಲ್ಲಬೇಕಾಗಿಲ್ಲ. ಬದಲಿಯಾಗಿ ಯಾವುದು ಸಾಮಾಜಿಕ ಅಸಮಾನತೆಗೆ ಕಾರಣವಾಗಿ ಅಸ್ಪೃಶ್ಯತಾಚರಣೆಯಂತ ಹೀನ ಆಚರಣೆಗೆ ನೆರವಾಗಿದೆಯೊ ಅಂತಹ ಅಮಾನವೀಯ ಜಾತೀ ಪದ್ಧತಿಯ ಬುಡ ಬೇರುಗಳನ್ನೆಲ್ಲಾ ಕಿತ್ತೊಗೆಯಬೇಕಾಗಿದೆ.

ಸಾಮಾಜಿಕ ಅಸಮಾನತೆಯಷ್ಟೇ ಆರ್ಥಿಕ ಅಸಮಾನತೆಯೂ ದಲಿತರ ಪಾಲಿಗೆ ಕ್ರೂರವಾಗಿದೆ. ದಲಿತರು ಜಾತೀ ಶೋಷಣೆಯ ವಿರುದ್ಧ ದನಿ ಎತ್ತಿದ ಹಾಗೆ ಆರ್ಥಿಕ ಅಸಮಾನತೆ ದಲಿತರ ಕೊರಳನ್ನು ಅದುಮಿಕೊಂಡಿದೆ. ಆದ್ದರಿಂದ ವರ್ಗರಹಿತ ಸಮಾಜ ಸೃಷ್ಟಿಯ ಆಶಯ ಹೊತ್ತು ಜಾತೀ ಅಸಮಾನತೆ ವಿರುದ್ಧದ ಹೋರಾಟಕ್ಕೆ ಕುಮ್ಮಕ್ಕು ಕೊಡುವ ವರ್ಗ ಹೋರಾಟವೂ ಈ ನೆಲದಲ್ಲಿ ಅಗತ್ಯವಾಗಿದೆ. ವರ್ಗ ಹೋರಾಟವಿಲ್ಲದೆ ವಿಮೋಚನೆ ಆಗಲಾರದು.

ಈ ದೇಶದಲ್ಲಿ ಬೆಳೆಯುತ್ತಿರುವ ಭಂಡವಾಳಶಾಹಿಯು ಸೃಷ್ಟಿಸಿದ ವರ್ಗಗಳಾದ ಕಾರ್ಮಿಕ, ಕೃಷಿ ಕಾರ್ಮಿಕ, ಬಡರೈತ ಮತ್ತು ಇತರೆ ಶೋಷಿತ ವರ್ಗಗಳ ಜನರು ಎಲ್ಲಾ ಜಾತಿಗಳಿಂದ ಬಂದವರಾಗಿದ್ದು, ಜಾತಿ ಧರ್ಮಗಳ ಬೇಧವನ್ನು ಮರೆತು ಎಲ್ಲರನ್ನೂ ಒಟ್ಟಾಗಿ ತುಳಿಯುವ ಭಂಡವಾಳ ಮತ್ತು ಭೂಮಾಲೀಕ ಶಕ್ತಿಗಳ ವಿರುದ್ಧ ಹೋರಾಡುವ ಆಶಯವನ್ನೊತ್ತಿವೆ. ಅಂತಹ ವರ್ಗಗಳ ಜೊತೆಯಲ್ಲಿ ಹಿಂದೂ ಧರ್ಮದ ಜಾತಿ ವ್ಯವಸ್ಥೆಯನ್ನು ಅಸ್ಫೋಟಿಸುವ ಆಶಯ ಹೊತ್ತ ದಲಿತರ ಹೋರಾಟಗಳು ಬೆಳೆದು ಬರಬೇಕಾಗಿದೆ. ಈ ರೀತಿಯ ಐಕ್ಯ ಹೋರಾಟದಲ್ಲಿ ಮಾತ್ರ ದಲಿತರ ಸಂಪೂರ್ಣ ವಿಮೋಚನೆ ಸಾಧ್ಯ. ಆಗ ಮಾತ್ರ ದಲಿತ ಮನದ ಅಂಗಳದಲ್ಲಿ ಸಮತೆಯ ಗಾಳಿ ಬೀರಿ, ತಮ್ಮ ಸುತ್ತಲ ಪರಿಸರ ಹೊಸದಾಗಿ ದಲಿತರೆಲ್ಲ ಹೊಸ ಮನುಷ್ಯರಾಗಲು ಸಾಧ್ಯ. ●

ದಿಲ್ಲಿ

ಪಾರ್ಲಿಮೆಂಟ್‌ನೆದುರು ನ್ಯಾಯವಾದಿಗಳ ಮತ ಪ್ರದರ್ಶನ

ದೇಶದ ಬೇರೆ ಬೇರೆ ಭಾಗಗಳಿಂದ ಆಗಮಿಸಿದ ಸುಮಾರು 300 ನ್ಯಾಯವಾದಿ (Advocates) ಗಳು ಮಾರ್ಚ್25 ರಂದು ಮತ ಪ್ರದರ್ಶನ ನಡೆಸಿದರು. ಪ್ರದರ್ಶನಕಾರರು ಸುಪ್ರಿಂ ಕೋರ್ಟಿನಿಂದ ಆರಂಭದಲ್ಲಿ ಹೊರಡಿಸಿದ್ದ ಮೆರವಣಿಗೆ ಬೋಟ್ ಕ್ಲಬ್ ತಲಪುವ ವೇಳೆಗೆ ರ್‍ಯಾಲಿಯಲ್ಲಿ ಪರಿವರ್ತನೆಗೊಂಡಿತ್ತು.

ಮೆರವಣಿಗೆಯ ನೇತೃತ್ವವನ್ನು ಖ್ಯಾತ ನ್ಯಾಯವಾದಿಗಳಾದ ದಾನಿಯಲ್ ಲತೀಫ್, ಪ. ಬಂಗಾಳದ ಕಾನೂನು ಮಂತ್ರಿ ಹಾಸೀಮ ಅಬ್ದುಲ್ ಹಾಲೀಮ್, ಪ. ಬಂಗಾಳದ ಅಡ್ವೋಕೇಟ್ ಜನರಲ್ ಎ. ಪಿ. ಚಟರ್ಜಿ, ಉಮೇಶ ಮಿಶ್ರ, ಹರದೇವ್ ಸಿಂಗ್ ಮತ್ತು ಪ. ಬಂಗಾಲದ ಅಡಿಷನಲ್ ಅಡ್ವೋಕೇಟ್ ಜನರಲ್ ಸಾಧನ್ ಗುಪ್ತ ವಹಿಸಿದ್ದರು.

ಮಾ. 23-24 ರಂದು "ಆಲ್ ಇಂಡಿಯಾ ಲಾಯರ್ಸ್ ಯೂನಿಯೂನಿಯನ್"ನ ನೇತೃತ್ವದಲ್ಲಿ ನಡೆದ ಎರಡು ದಿನಗಳ ಸಮ್ಮೇಳನದ ಅಂಗವಾಗಿ ಈ ಮತ ಪ್ರದರ್ಶನ ನಡೆಯಿತು. ಈ ಸಮ್ಮೇಳನದಲ್ಲೆ ಅಖಿಲ ಭಾರತ ಮಟ್ಟದ ಸಂಘಟನೆಯನ್ನು ವಿಧಿವತ್ತಾಗಿ ಘೋಷಿಸಲಾಯಿತು.

ಆಲ್ ಇಂಡಿಯಾ ಲಾಯರ್ಸ್ ಯೂನಿಯನ್ ಪರವಾಗಿ ಲೋಕ ಸಭಾಧ್ಯಕ್ಷರಿಗೆ ಸಲ್ಲಿಸಿದ ಮನವಿಯಲ್ಲಿ ಪ್ರಜಾ ತಂತ್ರವನ್ನು ಹತ್ತಿಕ್ಕಲು ನಡೆಯುತ್ತಿರುವ ಕುತಂತ್ರಗಳ ಬಗ್ಗೆ ಕಳವಳ ವ್ಯಕ್ತಪಡಿಸಲಾಗಿದೆ.

ಮಾ|| 25 ರಂದು ಬೋಟ್‌ಕ್ಲಬ್‌ನಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ| ಸಮರ್ ಮುಖರ್ಜಿ, ಕಾಂ| ಸೋಮನಾಥ ಚಟರ್ಜಿ ಮೊದಲಾದವರು ಮಾತನಾಡಿದರು.

ಸರ್ವಾಧಿಕಾರಿ ಆಳ್ವಿಕೆಯ ಪ್ರವೃತ್ತಿಯ ವಿರುದ್ಧ, ನಾಗರಿಕ ಸ್ವಾತಂತ್ರ್ಯವನ್ನು ರಕ್ಷಿಸಲು ನ್ಯಾಯವಾದಿಗಳು ಸಂಘಟಿತರಾಗಿ ಧ್ವನಿಯೆತ್ತಿದ್ದು ತುಂಬಾ ಗಮನಾರ್ಹ ಬೆಳವಣಿಗೆ.

—

ಮುದ್ರಣಾಲಯಗಳಲ್ಲಿ ಗಣಕೀಕರಣ

★ ಕೆ. ಎಸ್. ಸುಬ್ರಮಣ್ಯ

ಗಣಕೀಕರಣದ ಅವಾಂತರ ಕೇವಲ ಗುಮಾಸ್ತ (Clarks) ರುಗಳಿಗೆ ಮಾತ್ರ ಸೀಮಿತವಾಗಿಲ್ಲ. ಇದೀಗ ನಮ್ಮ ದೇಶದ ಮುದ್ರಣ ಕೆಲಸಗಾರರಿಗೂ ಇದರ ಬಿಸಿತಟ್ಟಿದೆ. ಗಣಕಯಂತ್ರ (Computer Controlled)ದ ಹತೋಟಿಯಲ್ಲಿ 'ಫೋಟೋ ಟೈಪ್ ಸೆಟ್ಟಿಂಗ್' ಮಾಡುವುದರ ಮೂಲಕ, ಮುದ್ರಣ ಕೈಗಾರಿಕೆಗೆ ಸಂಬಂಧಪಟ್ಟ ಕೆಲಸಗಾರರಿಗೆ ಕೆಲಸದ ಅವಕಾಶ ತುಂಬ ಕಡಿಮೆಯಾಗುವದಲ್ಲದೇ, ಇರುವ ಕೆಲಸಗಾರರೂ ಕೆಲಸಗಳನ್ನು ಕಳೆದುಕೊಳ್ಳುವ ಪರಿಸ್ಥಿತಿಯು ಬರುತ್ತಿದೆ. 'ಹಿಂದೂ', 'ಸ್ಟೇಟ್ಸ್‌ಮನ್' ಪತ್ರಿಕೆಗಳ ಕೆಲಸಗಾರರು ಈಗಾಗಲೇ ಈ ಅನುಭವ ಪಡೆಯುತ್ತಿದ್ದಾರೆ. ಸರಕಾರದ ಅಧೀನವಿರುವ ಮುದ್ರಣಾಲಯಗಳಲ್ಲಿ ಗಣಕೀಕರಣ ಹೆಚ್ಚುತ್ತಿದೆ. ಗಣಕೀಕರಣದಿಂದಾಗಿ ಸಣ್ಣ ಸಣ್ಣ ಮುದ್ರಣಾಲಯಗಳು ಮುಚ್ಚಿಕೊಂಡು ಹೋಗಬೇಕಾಗುತ್ತದೆ. ಮತ್ತು ದೊಡ್ಡ ಪ್ರೆಸ್‌ಗಳು ಬಹಳ ಕಡಿಮೆ ಕೆಲಸಗಾರರ ಮೂಲಕ ಹೆಚ್ಚಿನ ಲಾಭ ಗಳಿಸಲು ಅವಕಾಶವಾಗುತ್ತದೆ. ಆದ್ದರಿಂದ ಕೆಲಸಗಾರರ ಹಿತದೃಷ್ಟಿಯಿಂದ ಮಾತ್ರವಲ್ಲದೆ, ಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳ ಬೆಳವಣಿಗೆಯ ದೃಷ್ಟಿಯಿಂದಲೂ ಕೂಡ, ಗಣಕೀಕರಣವನ್ನು ತಡೆಹಿಡಿಯುವದವಶ್ಯ.

ಮುದ್ರಣಾಲಯಗಳಲ್ಲಿ ಗಣಕೀಕರಣದಿಂದುಂಟಾಗುವ ದುಷ್ಪರಿಣಾಮಗಳ ಬಗ್ಗೆ ಈಗಾಗಲೇ ಐ. ಎಲ್. ಓ. (International Labour Organisation) ಎಚ್ಚರಿಕೆ ಕೊಟ್ಟಿದೆ. ಗಣಕೀಕರಣದ ಮೂಲಕ ಮುಂದುವರಿದ ರಾಷ್ಟ್ರಗಳನ್ನು ಅಭಿವೃದ್ಧಿಶೀಲ ರಾಷ್ಟ್ರಗಳು ಅವಲಂಬಿಸಿರುವಂತೆ ಮಾಡಬೇಕೆಂಬ ಕುತಂತ್ರವೂ ಇದರಲ್ಲಡಗಿದೆ. ಏಕೆಂದರೆ, ಇಂಥ ಯಂತ್ರಗಳನ್ನು ತಯಾರಿಸುವುದು ಮುಂದುವರಿದ ಹಾಗೂ ಪ್ರಭಲ ರಾಷ್ಟ್ರಗಳಲ್ಲಿ ಮಾತ್ರ ಸಾಧ್ಯ.

"ಗಣಕೀಕರಣ, ಕೆಲಸಗಾರರನ್ನು ಉಳಿತಾಯ ಮಾಡುವ ಯೋಜನೆ" ಎಂದು ಐ.ಎಲ್.ಓ. ಒತ್ತಿ ಹೇಳಿದೆ. ಇದರ ವರದಿ ಪ್ರಕಾರ (ILO Report Page 7) ದೊಡ್ಡ ವಾರ್ತಾ ಪತ್ರಿಕೆಯ ಒಂದು ಪುಟವನ್ನು ತಯಾರಿಸಲು ಕೈಯಿಂದ ಅಚ್ಚು ಮೊಳೆ ಜೋಡಿಸಿ(Hand composing) 22 ಘಂಟೆ ಬೇಕಾಗುತ್ತದೆ; ಯಂತ್ರದ ಮೂಲಕ ಅಚ್ಚು ಮೊಳೆ ಜೋಡಿಸಲು 5.5 ಘಂಟೆ ಬೇಕು; ಟೆಲಿ-ಟೈಪ್ ಸೆಟ್ಟಿಂಗ್ ಮಾಡಿ 1.3 ಘಂಟೆ; ಇಲೆಕ್ಟ್ರೋನಿಕ್ ಹತೋಟಿಯಲ್ಲಿರುವ ಫಿಲ್ಮಂ ಸೆಟ್ಟಿಂಗ್ ಯಂತ್ರದ ಮೂಲಕ ಕೇವಲ 15 ಸೆಕೆಂಡುಗಳು ಮಾತ್ರ ಸಾಕು.

ಅಂದರೆ ಕಂಪ್ಯೂಟರ್ ಸಹಾಯದಿಂದ ನಡೆಯುವ ಫಿಲ್ಮಂ ಸೆಟ್ಟಿಂಗ್ ಯಂತ್ರ ಒಂದು ಘಂಟೆ ಕಾಲದಲ್ಲಿ 80 ಲಕ್ಷ ಅಕ್ಷರಗಳನ್ನು ಜೋಡಿಸುತ್ತದೆ. ಇದರ ವೇಗವು ಊಹಿಸಲೂ ಅಸಾಧ್ಯವಾದ ರೀತಿಯಲ್ಲಿದೆ ಅಂದರೆ ಉತ್ಪ್ರೇಕ್ಷೆಯಾಗಲಾರದು.

1977-78ರಲ್ಲಿ ನಮ್ಮ ದೇಶದ ಮುದ್ರಣಾಲಯಗಳಲ್ಲಿ ಕೆಲಸಮಾಡುವವರ ಸಂಖ್ಯೆ 1,64,000 ದಿಂದ 1,00,000ಕ್ಕೆ ಇಳಿಯಿತು. ನಂತರದ ಅಂಕಿಅಂಶ ಇನ್ನೂ ತಿಳಿದು ಬಂದಿಲ್ಲ. 1974 ರಿಂದ ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟ ರೇಲ್ವೆ ಮತ್ತು ಇತರ ವಿಭಾಗಗಳಲ್ಲಿನ ಮುದ್ರಣಾಲಯಗಳಲ್ಲಿ ಹೊಸ ಕೆಲಸಗಾರರನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸಲಾಗಿದೆ. ಇದು ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟ ಮುದ್ರಣಾಲಯಗಳಲ್ಲಿ, ಹಿಂದೂ ಮತ್ತಿತರ ದೊಡ್ಡ ದೊಡ್ಡ ಮುದ್ರಣಾಲಯಗಳಲ್ಲಿ ಗಣಕೀಕರಣಕ್ಕೆ ಅನುಮತಿ (ಲೈಸೆನ್ಸ್) ಕೊಟ್ಟಿದ್ದರ ಪರಿಣಾಮ. ಕೇಂದ್ರ ಸರಕಾರದ ಈ ನೀತಿ ಐ. ಎಲ್. ಓ. ಅಭಿವೃದ್ಧಿಶೀಲ ದೇಶಗಳಿಗೆ ಕೊಟ್ಟ ಮಾರ್ಗದರ್ಶನ ಸೂತ್ರಗಳಿಗೂ ವಿರುದ್ಧವಾಗಿದೆ. ಕೆಲಸದ ಅವಕಾಶವನ್ನು ಹೆಚ್ಚಿಸುವದು ಮತ್ತು ಇದಕ್ಕೆ ಸಹಾಯವಾಗುವ ರೀತಿಯಲ್ಲಿ ನವೀನೀಕರಣ (New technology) ವನ್ನು ಜಾರಿಗೆ ತರುವದು ಅಭಿವೃದ್ಧಿ ಶೀಲ ರಾಷ್ಟ್ರಗಳ ಧೇಯ್ಯವಾಗಿರಬೇಕು ಎಂದು ಐ. ಎಲ್. ಓ. ತಿಳಿಸಿದೆ ("In many developing countries, however, employment generation is a key social objective and in principale job creation should be an important consideration in the choies of new technology"—Report III Page 13).

ಕೇಂದ್ರ ಸರಕಾರ ಈ ಕುರಿತು ಅಸಡ್ಡೆ ಮನೋಭಾವದಿಂದಿರುವುದು ಸರಿಯಲ್ಲ. ಸಂಬಂಧಪಟ್ಟ ಕಾರ್ಮಿಕ ಸಂಘಗಳೊಡನೆ ಸಮಾಲೋಚನೆ ಮಾಡಿ ಈ ಗಣಕ ರಾಕ್ಷಸನನ್ನು ಅತ್ಯಂತ ಹತೋಟಿಯಲ್ಲಿಟ್ಟುಕೊಳ್ಳಬೇಕಾಗಿದೆ.

ಈ ಬಗ್ಗೆ ಸಿ.ಐ.ಟಿ.ಯು. ಮತ್ತು 'ಸ್ಟೇಟ್ಸ್‌ಮನ್' ಪತ್ರಿಕೆಯ ಕೆಲಸಗಾರರ ಸಂಘವು ಸರಕಾರಕ್ಕೆ ಎಚ್ಚರಿಕೆಕೊಟ್ಟಿವೆ. ಉದ್ಯೋಗ ವಿನಿಮಯ ಕೇಂದ್ರದ ವರದಿಯ ಪ್ರಕಾರವೇ 17 ಮಿಲಿಯ ದಷ್ಟು ಜನರು ನಮ್ಮ ದೇಶದಲ್ಲಿ ಕೆಲಸವಿಲ್ಲದೆ ಇರುವಾಗ, ಹೆಚ್ಚು ಉದ್ಯೋಗವಕಾಶಗಳನ್ನು ಉಂಟುಮಾಡುವುದರ ಬದಲು ಕೆಲಸದ ಅವಕಾಶ ಕಡಿಮೆ ಮಾಡುವ ಯಂತ್ರೋಪಕರಣಗಳನ್ನು ಅಳವಡಿಸುವದು ಕಾರ್ಮಿಕ ವರ್ಗಕ್ಕೆ ದ್ರೋಹ ಹಾಗೂ ದೇಶದ್ರೋಹವೆಂದರೂ ತಪ್ಪಾಗಲಾರದು.

ಈಗಲಾದರೂ ಕೇಂದ್ರ ಸರಕಾರ ವಿಳಂಬಮಾಡದೆ, ಮಾಲೀಕರ, ಕೆಲಸಗಾರರ ಪ್ರತಿನಿಧಿಗಳ ಮತ್ತು ಸರಕಾರದ ಪ್ರತಿನಿಧಿಗಳನ್ನೊಳಗೊಂಡ ತ್ರಿಪಕ್ಷೀಯ ಸಭೆಯನ್ನು ಕರೆಯಬೇಕೆಂದೂ; ಈ ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ ಮುದ್ರಣ ಕೈಗಾರಿಕೆಯಲ್ಲಿ ಗಣಕೀಕರಣದ ಬಗ್ಗೆ ಸರಕಾರಕ್ಕೆ ಸಲಹೆಕೊಡಲು ತ್ರಿಪಕ್ಷೀಯ ಮಂಡಲಿಯನ್ನು ನೇಮಕ ಮಾಡಬೇಕೆಂದೂ; ಗಣಕೀಕರಣ ಯಂತ್ರಗಳ ಆಮದಿಗೆ ಈ ವರೆಗೆ ಕೊಟ್ಟ ಲೈಸೆನ್ಸ್‌ಗಳನ್ನು ಅಮಾನತ್ತಿನಲ್ಲಿಡಬೇಕೆಂದೂ, ಇನ್ನು ಮುಂದೆ ಲೈಸೆನ್ಸ್‌ಗಳನ್ನು ತ್ರಿಪಕ್ಷೀಯ ಸಲಹಾ ಸಮಿತಿಯ ಒಪ್ಪಿಗೆ ಇಲ್ಲದೇ ಕೊಡಕೂಡದೆಂದು ಸಿ.ಐ.ಟಿ.ಯು. ಕೇಂದ್ರ ಸರಕಾರಕ್ಕೆ ಮನವಿ ಮಾಡಿದೆ.

ಸರಕಾರವು ಈಗಲಾದರು ಕಣ್ತೆರೆದು ಜವಾಬ್ದಾರಿಯುತವಾಗಿ ವರ್ತಿಸುತ್ತದೆ ಎಂದು ಆಶಿಸಬಹುದೇ ? ●

★ ಕಾಂ। ಕೆ. ಎಸ್. ಸುಬ್ರಮಣ್ಯ ಅವರು ಕರ್ನಾಟಕ ಸ್ಟೇಟ್ ಪ್ರಿಂಟಿಂಗ್ ಪ್ರೆಸ್ ವರ್ಕರ್ಸ್ ಅಸೋಸಿಯೇಶನ್, ಬೆಂಗಳೂರು ಇದರ ಕಾರ್ಯದರ್ಶಿಯಾಗಿದ್ದಾರೆ.

ಯು.ಪಿ. ಮತ್ತು ರಾಜಸ್ಥಾನ :

ಸರಕಾರಿ ನೌಕರರ ಮೇಲೆ ನಡೆಯುತ್ತಿರುವ ದಮನಕಾರಿ ಕ್ರಮಗಳ ಖಂಡನೆ

ತುಟ್ಟಿಭತ್ತೆ ಮತ್ತಿತರ ಬೇಡಿಕೆಗಳಿಗಾಗಿ ಸರಕಾರಗಳೇ ನೇಮಿಸಿದ್ದ ಸಮಿತಿಯನ್ನು ಅನುಷ್ಠಾನಕ್ಕೆ ತರುವಂತೆ ಒತ್ತಾಯಿಸಿ ಉತ್ತರ ಪ್ರದೇಶ ಮತ್ತು ರಾಜಸ್ಥಾನ ಸರಕಾರಿ ನೌಕರರು ನಡೆಸುತ್ತಿರುವ ಹೋರಾಟವನ್ನು ಸದೆಬಡಿಯಲು ದಮನಕಾರಿ ಕ್ರಮಗಳನ್ನು ಸಿ.ಐ.ಟಿ.ಯು. ಅಧ್ಯಕ್ಷ ಕಾಂ। ಬಿ. ಟಿ. ರಣದಿವೆ ಮತ್ತು ಪ್ರಧಾನ ಕಾರ್ಯದರ್ಶಿ ಕಾಂ। ಪಿ. ರಾಮಮೂರ್ತಿಯವರು ತೀವ್ರವಾಗಿ ಖಂಡಿಸಿದ್ದಾರೆ. ಅವರು ಈ ಕುರಿತು ಹೊರಡಿಸಿದ ಪತ್ರಿಕಾ ಹೇಳಿಕೆಯ ಸಂಕ್ಷಿಪ್ತ ಪಾಠ ಇಂತಿದೆ :

"ಉತ್ತರ ಪ್ರದೇಶ ಮತ್ತು ರಾಜಸ್ಥಾನದಲ್ಲಿ ತಮ್ಮ ಬೇಡಿಕೆಗಳಿಗೋಸ್ಕರ ಹೋರಾಡುತ್ತಿರುವ ಸರಕಾರಿ ನೌಕರರ ಮೇಲೆ ನಡೆಯುತ್ತಿರುವ ದಮನಕಾರೀ ಕ್ರಮಗಳನ್ನು ಸಿ.ಐ.ಟಿ.ಯು. ಬಲವಾಗಿ ಖಂಡಿಸುತ್ತದೆ. ಈ ಸರಕಾರಗಳು ನೌಕರರ ತುಟ್ಟಿಭತ್ತೆ ಮತ್ತಿತರ ಸೌಲಭ್ಯಗಳ ಕುರಿತು ಸಮಿತಿಯನ್ನು ನಿಯಮಿಸಿದ್ದವು. ಈ ಸಮಿತಿಯು ಮಾಡಿದ ಶಿಫಾರಸುಗಳನ್ನು ಜಾರಿಗೆ ತರುವಂತೆ ಒತ್ತಾಯಿಸಿ ಸರಕಾರಿ ನೌಕರರು ಹೋರಾಟ ನಡೆಸಿದ್ದಾರೆ. ರಾಜಸ್ಥಾನ ಸರಕಾರವು ತಾನೇ ನಿಯಮಿಸಿದ್ದ ಬೆರ್ರಿ (Berry) ಸಮಿತಿಯ ಶಿಫಾರಸುಗಳನ್ನು 'ಆರ್ಥಿಕ ಅಡಚಣೆ' ಎಂಬ ನೆಪವೊಡ್ಡಿ ಜಾರಿಗೆ ತರುತ್ತಿಲ್ಲ."

"ಕೇಂದ್ರ ಸರಕಾರವು ಸ್ವಯಂಪ್ರೇರಣೆಯಿಂದ ಅಂತರಾಷ್ಟ್ರೀಯ ಹಣಕಾಸು ನಿಧಿ (IMF)ಯ ಶರತ್ತುಗಳನ್ನು ಒಪ್ಪಿಕೊಂಡ ಕಾರಣದಿಂದ ರಾಜಸ್ಥಾನ ಸರಕಾರವು 50 ಶೇಕಡ ತುಟ್ಟಿಭತ್ತೆಯನ್ನು ಕೊಡುವುದನ್ನು ನಿರಾಕರಿಸಲು ಕೇಂದ್ರವು ಒತ್ತಡ ತಂದಿದೆ. ಅಲ್ಲದೇ ಸಹಸ್ರಾರು ನೌಕರರನ್ನು ವಿನಾಕಾರಣ ಬಂಧಿಸುತ್ತಿದೆ."

"ಸರಕಾರದ ನೀತಿಯನ್ನು ಖಂಡಿಸಿ ಐಕ್ಯ ಹೋರಾಟ ನಡೆಸುತ್ತಿರುವ ನೌಕರರನ್ನು ಸಿ.ಐ.ಟಿ ಯು ಅಭಿನಂದಿಸುತ್ತದೆ."

"ಮತ್ತೆ ಕಡ್ಡಾಯ ಠೇವಣಿ ಯೋಜನೆಯನ್ನು ಜಾರಿಗೆ ತರಲೆತ್ನಿಸುತ್ತಿರುವ ಸರಕಾರದ ಕ್ರಮಗಳನ್ನು ಪ್ರತಿಭಟಿಸಲು ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಮುಂದೆ ಬರಬೇಕೆಂದು ಸಿ.ಐ.ಟಿ.ಯು. ಕರೆಕೊಡುತ್ತದೆ."

ತಮಿಳ್ನಾಡು :

ರಾಜಧಾನಿಗೆ ಸಿ.ಪಿ.ಐ.(ಎಂ) ಜಾಥಾ

ಬೆಲೆ ಏರಿಕೆಯನ್ನು ಪ್ರತಿಭಟಿಸಿ, ಅವಶ್ಯಕ ವಸ್ತುಗಳನ್ನು ರಿಯಾಯಿತಿ ದರದಲ್ಲಿ ಒದಗಿಸಬೇಕೆಂದು, ರೈತರ ಸಾಲಗಳನ್ನು ಮನ್ನಾ ಮಾಡಬೇಕು, ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ ಜಾರಿಗೊಳಿಸುವಂತೆ ಒತ್ತಾಯಿಸಿ ಸಿ.ಪಿ.ಐ.(ಎಂ) ತಮಿಳುನಾಡು ರಾಜ್ಯ ಘಟಕವು ಮದ್ರಾಸಿಗೆ ಜಾಥಾ ಕಾರ್ಯಕ್ರಮ ಹಾಕಿಕೊಂಡಿದೆ.

ಏಪ್ರಿಲ್ 13 ರಿಂದ ಕನ್ಯಾಕುಮಾರಿ, ಮಧುರೈ, ಕೊಯಿಮತ್ತೂರು ಮತ್ತು ಧರ್ಮಪುರಿ ಜಿಲ್ಲೆಗಳಿಂದ ಪಾದಯಾತ್ರೆ ಜಾಥಾ ಪ್ರಾರಂಭಗೊಂಡಿವೆ.

ವಿಷ ಬಯಸಿರುವ ಹುತಾತ್ಮನ ಸೋದರಿ !

ಬ್ರಿಟಿಷ್ ಸಾಮ್ರಾಜ್ಯ ಶಾಹಿಗಳನ್ನು ದೇಶದಿಂದ ಹೊರದೂಡುವಾಗ ನಡೆದ ಮಹಾನ್ ಹೋರಾಟದಲ್ಲಿ ಅನೇಕರು ಬಲಿಯಾಗಿದ್ದರು.

ಇತಿಹಾಸ ಪ್ರಸಿದ್ಧ ಕಾಕೋರಿ ದರೋಡೆ ಮೊಕದ್ದಮೆಯಲ್ಲಿ ಗಲ್ಲು ಶಿಕ್ಷೆಗೊಳಗಾದವರಲ್ಲಿ ಹುತಾತ್ಮ ರಾಮ ಪ್ರಸಾದ್ ಬಿಸ್ಮಿಲ್‌ರೂ ಒಬ್ಬರು. ಸರ್ ಫರೋಶಿ ಕೀ ತಮನ್ನಾ ಅಬ್ ಹಮಾರೇ ದಿಲ್ ಮೇ ಹೈ (ನಮ್ಮ ತಲೆಗಳನ್ನು ಒಪ್ಪಿಸಲು ನಮ್ಮ ಹೃದಯಗಳು ಕಾತುರಗೊಂಡಿವೆ) ಎಂದೆನ್ನುತ್ತ ಪಂಡಿತ್ ಬಿಸ್ಮಿಲ್ ಅವರು ನೇಣುಗಂಬಕ್ಕೇರಿದ್ದರು.

ಈಗ ಆ ಹುತಾತ್ಮನ 72 ವರ್ಷದ ಸೋದರಿ ಸಾವಿತ್ರಿದೇವಿಯವರು ಉತ್ತರ ಪ್ರದೇಶದ ಕಾಂಗ್ರೆಸ್ ಸರ್ಕಾರಕ್ಕೊಂದು ಈ ರೀತಿ ಪತ್ರ ಬರೆದಿದ್ದಾರೆ. "ಶರೀರ ತೀರ ದುರ್ಬಲಗೊಂಡಿದೆ. ಇನ್ನು ಮುಂದೆ ಕೂಲಿ ಕೆಲಸ ಮಾಡಲೂ ಅಸಮರ್ಥಳಾಗಿರುವೆ. ಮೂರು ತಿಂಗಳಿಂದಲೂ ಪಲ್ಲಂಗದಿಂದ ಇಳಿಯಲಾಗಿಲ್ಲ. ನನ್ನ ಮೇಲೆ ದಯೆ ಇಟ್ಟು ನನಗೆ ವಿಷದ ಚುಚ್ಚು ಮದ್ದನ್ನಾದರೂ ಕೊಡಿಸಿ."

ಸಾವಿತ್ರಿ ದೇವಿಯವರು ಮೈನಪುರ ಜಿಲ್ಲೆಯ ಕೋಸಮಾ ಎಂಬ ಹಳ್ಳಿಯಲ್ಲಿ ವಾಸಮಾಡುತ್ತಿದ್ದಾರೆ. ಅವರ ಏಕಮಾತ್ರ ಪುತ್ರನೊಬ್ಬ ಧನುರ್ವಾತದಿಂದ ಪೀಡಿತನಾಗಿ ಚಲಿಸಲೂ ಸಾಧ್ಯವಿಲ್ಲದ ಸ್ಥಿತಿಯಲ್ಲಿದ್ದಾನೆ. ಸಾವಿತ್ರಿ ದೇವಿಯ 3 ಭಿಘ (ಸುಮಾರು 3 ಗುಂಟೆ) ಜಮೀನು ಮಾರವಾಡಿಯ ಬಳಿ ಗಿರವಿ ಬಿದ್ದಿದೆ. ಸ್ವತಂತ್ರ ಭಾರತದಲ್ಲಿ ಸಾವಿತ್ರಿದೇವಿ ಅವರು ಉಳ್ಳವರ ಮನೆಯ ಕಸ-ಮುಸುರೆ-ಅಡುಗೆ ಮಾಡಿ ಕಾಲ ತಳ್ಳುತ್ತಿದ್ದರು.

ಈಗ ವೃದ್ಧಾಪ್ಯದಿಂದ ಅಸಹಾಯರಾದ ಮೇಲೆ ಬಡ ಜನರ ಕಣ್ಮಣಿ (?) ಇಂದಿರಾ ಸರಕಾರಕ್ಕೆ ಪತ್ರ ಬರೆದು ವಿಷದ ಚುಚ್ಚು ಮದ್ದು ಕೊಡಬೇಕೆಂದು ಯಾಚಿಸಿದ್ದಾರೆ.

ಕಾಂಗ್ರೆಸ್ ಭ್ರಷ್ಟರ ಆಡಳಿತದಲ್ಲಿ ಯಾರು-ಯಾರೋ ಸ್ವಾತಂತ್ರ್ಯ ಯೋಧರೆಂದು ಅರ್ಜಿ ಸಲ್ಲಿಸಿ ಹಣ ಲಪಟಾಯಿಸಿ ಮಜಾ ಮಾಡುತ್ತಿದ್ದಾರೆ.

ದೇಶಕ್ಕಾಗಿ ಮಹಾನ್ ತ್ಯಾಗ ಮಾಡಿದ ಬಿಸ್ಮಿಲ್‌ರ ಸೋದರಿಗೆ ಒದಗಿರುವ ಪರಿಸ್ಥಿತಿ ತುಂಬಾ ಖೇದನೀಯ.

ಸಾವಿತ್ರಿ ದೇವಿಯ ಪರಿಸ್ಥಿತಿಯನ್ನು ಗಮನಿಸದ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ ! ಭ್ರಷ್ಟರಿಗೆ ಧಿಕ್ಕಾರ ! ಧಿಕ್ಕಾರ ! ●

ಕ್ರಿಸ್ಪ್ ಬಿಸ್ಕಟ್ ಕಾರ್ಮಿಕರಿಗೆ ಹಣ, ಧಾನ್ಯ ಕೊಡುಗೆ

ಆಡಳಿತ ವರ್ಗದ ದಬ್ಬಾಳಿಕೆ, ಅಕ್ರಮ ವಜಾ ವಿರುದ್ಧ ಹೋರಾಟ ನಡೆಸುತ್ತಿರುವ ಬೆಂಗಳೂರಿನ ಕ್ರಿಸ್ಪ್ ಬಿಸ್ಕಟ್ ಕಾರ್ಮಿಕರಿಗೆ ಹಣ, ಧಾನ್ಯ ಕೊಡುಗೆ ನೀಡಿರುವ ಇನ್ಶೂರನ್ಸ್ ಕಾರ್ಪೋರೇಷನ್ ಎಂಪ್ಲಾಯೀಸ್ ಯೂನಿಯನ್ (ICEU)ನವರನ್ನು ಬೆಂಗಳೂರು ಜಿಲ್ಲಾ ಸಿ. ಟಿ. ಐ. ಯು. ಅಭಿನಂದಿಸಿದೆ. ICEU ಕಾರ್ಯಕರ್ತರು ಎಲ್ಲೈಸಿ ಕಾಲೋನಿಯಲ್ಲಿ ಸಂಚರಿಸಿ ಕ್ರಿಸ್ಪ್ ಬಿಸ್ಕಟ್ ಕಾರ್ಮಿಕರಿಗೆ ಧಾನ್ಯ ವಗೈರೆ ಸಂಗ್ರಹಿಸಿದ್ದಾರೆ. ಸಂಗ್ರಹದಲ್ಲಿ ಸುಮಾರು ಒಂದು ಕ್ವಿಂಟಾಲ್ ಅಕ್ಕಿ ಮತ್ತು ಸುಮಾರು ರೂ. 250 ಸೇರಿದೆ.

●

ಮನವಿ ಸ್ವೀಕರಿಸಲು ಮಂತ್ರಿಯ ನಕಾರ

ದ. ಕ. ಜಿಲ್ಲೆಯ ಉಳ್ಳಾಲ ರೈಲ್ವೆ ಸೇತುವೆಯ ಕಾಲುದಾರಿ ಮುಚ್ಚಿರುವುದನ್ನು, ಪುನಃ ತೆಗೆಯಬೇಕೆಂದು ಆ ಭಾಗದ ನಾಗರೀಕರು ಅನೇಕ ಬಾರಿ ಒತ್ತಾಯಿಸಿದ್ದಾರೆ.

9-4-82 ರಂದು ಈ ಭಾಗದ ಸಂಚಾರದಲ್ಲಿದ್ದ ಕೇಂದ್ರ ವಿತ್ತ ಸಹಾಯಕ ಮಂತ್ರಿ ಜನಾರ್ಧನ ಪೂಜಾರಿಯವರಿಗೆ ಈ ಕುರಿತು. ಕೋಟೆಕ್ಕಾರ್ ರೈತ ಸಂಘದ ಅಧ್ಯಕ್ಷ ಕಾಂ। ಯು. ಪಿ. ಡಿಸೋಜ ಮತ್ತು ಕಾರ್ಯದರ್ಶಿ ಕಾಂ। ರಾಮಚಂದ್ರ ಉಚ್ಚಿಲ್ ಮನವಿ (2000 ಜನರ ಸಹಿ ಇದ್ದ) ಸಲ್ಲಿಸಲು ಹೋದಾಗ ಮಾನ್ಯ (?) ಮಂತ್ರಿಗಳು ಮನವಿ ಸ್ವೀಕರಿಸಲೂ ನಿರಾಕರಿಸಿದ ವರದಿಯಾಗಿದೆ.

ಬಡಜನತೆಯ ಹೆಸರಿನಲ್ಲಿ ಆಳ್ವಿಕೆ ನಡೆಸುತ್ತಿರುವ ಈ ಕೊಬ್ಬಿದ ಮಂತ್ರಿಗೆ ಧಿಕ್ಕಾರ !.

●

ಎಸ್. ಎಫ್. ಐ. ಮುಖಂಡರ ಕೊಲೆಪಾತಕಿಗಳಿಗೆ ಜೀವಾವಧಿ ಶಿಕ್ಷೆ

1981 ಮಾರ್ಚ್ 30 ರಂದು ತಮಿಳುನಾಡಿನ ಮಧುರೈ ಜಿಲ್ಲೆಯ ತಿರುಪ್ಪರಕುಂಡ್ರಂನ ತ್ಯಾಗರಾಜ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಸಂಘದ ಮುಖಂಡರೂ, ಎಸ್. ಎಫ್. ಐ. ಮುಂದಾಳುಗಳೂ ಆಗಿದ್ದ ಕಾಂ। ಜಂಬುಲಿಂಗಂ ಮತ್ತು ಸೋಮಸುಂದರಂರವರನ್ನು ಜಾತಿವಾದೀ ಗೂಂಡಾಗಳು ಅಮಾನುಷವಾಗಿ ಕೊಲೆಗೈದರು. ಈ ಕೊಲೆಪಾತಕಿಗಳು ಡಿ. ಎಂ. ಕೆ. ಬೆಂಬಲಿಗರೆಂದು ಹೇಳಲಾಗಿತ್ತು. ಈ ಘಟನೆಯ ಬಗ್ಗೆ ಕಳೆದ ಏಪ್ರಿಲ್ 5ರಂದು ನ್ಯಾಯಾಧೀಶ ಆರ್. ಧನಂಜಯ ಅವರು ತೀರ್ಪು ನೀಡಿದ್ದು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ.

ಏಪ್ರಿಲ್ ೫ ರಂದು ನಡೆದ

ಪ್ರತಿಭಟನಾ ದಿನಾಚರಣೆ

ಮುಳಬಾಗಿಲುನಲ್ಲಿ ನಡೆದ ಪ್ರಾಂತ ರೈತ ಸಂಘದ 7ನೇ ಸಮ್ಮೇಳನದ ತೀರ್ಮಾನಕ್ಕನುಗುಣವಾಗಿ ಏಪ್ರಿಲ್ 5 ರಂದು ನಾನಾಕಡೆ ರೈತ ಸಂಘದ ನೇತೃತ್ವದಲ್ಲಿ ಪ್ರತಿಭಟನಾ ದಿನಾಚರಣೆ ನಡೆದಿದೆ. ಕಳೆದ ವಾರ (11-4-82) ದ ಪತ್ರಿಕೆಯಲ್ಲಿ ವಿವರ ಪ್ರಕಟಿಸಲಾಗಿತ್ತು. ಮತ್ತೆ ಲಭ್ಯವಾಗಿರುವ ವರದಿ ಇಂತಿದೆ :

ಬಿಜಾಪುರ :

ಪ್ರತಿಭಟನಾ ದಿನಾಚರಣೆಯ ಅಂಗವಾಗಿ ಏಪ್ರಿಲ್ 5 ರಂದು ಜಿಲ್ಲಾ ರೈತ ಸಂಘದ ನೇತೃತ್ವದಲ್ಲಿ ರೈತರ ಸಮಸ್ಯೆಗಳನ್ನೊಳಗೊಂಡ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಯಿತು.

ರೈತರ ಬೆಳೆಗೆ ಯೋಗ್ಯ ಬೆಲೆ, ರಿಯಾಯಿತಿ ದರದಲ್ಲಿ ಕೃಷಿ ಸಾಮಾಗ್ರಿಗಳು ಲಭ್ಯವಾಗಬೇಕು, ಸಾಲ ವಸೂಲಿಯಲ್ಲಿ ನಡೆದಿರುವ ದಬ್ಬಾಳಿಕೆಯ ಖಂಡನೆ, ಸಣ್ಣ ರೈತರ ಸಾಲ ವಜಾ ಆಗಬೇಕು, ಬಸ್ ದರ ಏರಿಕೆಯನ್ನು ವಾಪಸ್ಸು ಪಡೆಯಬೇಕು ಎಂಬಿತ್ಯಾದಿ ಬೇಡಿಕೆಗಳು ಮನವಿ ಪತ್ರದಲ್ಲಿ ಒಳಗೊಂಡಿದ್ದವು.

ಸುತ್ತಮುತ್ತಲಿನ ಹಳ್ಳಿಗಳಿಂದ ನೂರಾರು ರೈತರು ಮೆರವಣಿಗೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದರು. ನಗರದಲ್ಲಿ ನಿಷೇಧಾಜ್ಞೆ ಇದ್ದುದರಿಂದ ಮೆರವಣಿಗೆ ನಡೆಯಲಿಲ್ಲ.

ಜಿಲ್ಲಾಧಿಕಾರಿಗಳನ್ನು ಭೇಟಿಯಾದ ನಿಯೋಗದಲ್ಲಿ ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ॥ ಭೀಮಸಿ ಕಲಾದಗಿ, ಡಿ. ಎಂ. ಖಲಾಸಿ, ಎಂ. ಆಯ್. ಪಾಟೀಲ, ಹೊನ್ನುಟಗಿ, ಎಸ್. ಡಿ. ಇಂಡಿ ಮೊದಲಾದವರಿದ್ದ. ಈ ನಿಯೋಗವು ಬೇಡಿಕೆಗಳನ್ನು ಈಡೇರಿಸುವಂತೆ ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿದೆ.

ಕುಂದಾಪುರ :

ಏಪ್ರಿಲ್ 5ರಂದು ಪ್ರತಿಭಟನಾ ದಿನಾಚರಣೆಯ ಅಂಗವಾಗಿ ದ. ಕ. ಜಿಲ್ಲೆಯ ಕುಂದಾಪುರದಲ್ಲಿ ತಾಲ್ಲೂಕು ಕಚೇರಿ ಎದುರು ರೈತರ ಯಶಸ್ವೀ ಧರಣಿ ಸತ್ಯಾಗ್ರಹ ನಡೆಯಿತು.

ಧರಣಿ ಸತ್ಯಾಗ್ರಹದ ಆರಂಭಕ್ಕೆ ಮೊದಲು ಗ್ರಾಮಾಂತರ ಪ್ರದೇಶಗಳಿಂದ ಆಗಮಿಸಿದ ಸುಮಾರು 1300 ಜನ ರೈತರು ಕೃಷಿ ಕಾರ್ಮಿಕರು ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ರೈತರ ಬೇಡಿಕೆಗಳಿಗೆ ಬೆಂಬಲ ಸೂಚಿಸಿ ಸಿ ಐ ಟಿ ಯು ನೇತೃತ್ವದ ಕಾರ್ಮಿಕರು ಭಾರೀ ಮೆರವಣಿಗೆ ಹೊರಡಿಸಿದ್ದರು.

ಸಂಜೆ ನಡೆದ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಕಾಂ॥ ಯು. ದಾಸ್ ಭಂಢಾರಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ॥ ಅಬ್ರಹಾಂ ಕರ್ಕಡ್ ಆಗಮಿಸಿದ್ದರು. ಸಭೆಯನ್ನುದ್ದೇಶಿಸಿ ಕಾಂ॥ ಸಿ. ನಾರಾಯಣ, ಕೆ. ಶಂಕರ್, ಕೆ. ಆನಂದ ಭಂಡಾರಿಯವರು ಮಾತನಾಡಿದರು. ಆರಂಭದಲ್ಲಿ ಗೋವಿಂದ ಸೆಟ್ಟಿಗಾರ್ ಸಭಿಕರನ್ನು ಸ್ವಾಗತಿಸಿದರು.

ಸವದತ್ತಿ :

ಪ್ರಾಂತ್ಯ ರೈತ ಸಂಘದ ಕರೆಯ ಮೇರೆಗೆ ಏಪ್ರಿಲ್ 5 ರಂದು ಪ್ರತಿಭಟನಾ ದಿನಾಚರಣೆ ನಡೆಸಲಾಯಿತು.

ಕಾಂ। ಎಸ್. ಎಚ್. ಕಪ್ಪಣ್ಣವರ, ಸ್ವಾಮಿ ನಿತ್ಯಾನಂದಜಿ, ಬಾಬಣ್ಣ ಹಂಪಣ್ಣವರ, ಅಲ್ಲಮಪ್ರಭು ಮನಗೂಳಿ, ಶಂಭುಲಿಂಗಪ್ಪ ಸೊನ್ನದ ಮುಂತಾದವರ ನೇತೃತ್ವದ ನಿಯೋಗವೊಂದು ತಹಸೀಲ್ದಾರರನ್ನು ಭೇಟಿಯಾಗಿ ರೈತರ ಬೇಡಿಕೆಗಳನ್ನೊಳಗೊಂಡ ಮನವಿ ಸಲ್ಲಿಸಿತು.

ಮಲಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿ ನೀರಿನ ಕರ ಸರಿಯಾಗಿ ನಿರ್ಣಯವಾಗುವವರೆಗೆ ಕರಾಕರಣೆಯನ್ನು ಸ್ಥಗಿತಗೊಳಿಸಬೇಕೆಂದು, ಸಾಲ ವಸೂಲಿಯಲ್ಲಿ ಜಪ್ತಿ ಮುಂತಾದ ಬಲಾತ್ಕಾರದ ಕ್ರಮಗಳನ್ನು ಕೈಬಿಡಬೇಕೆಂದೂ ಮನವಿಯಲ್ಲಿ ಒತ್ತಾಯಿಸಲಾಗಿದೆ.

ಶಿಡ್ಲಘಟ್ಟ :

5-4-82 ರಂದು ಪ್ರಾಂತ ರೈತ ಸಂಘದ ಕರೆಯ ಮೇರೆಗೆ ಕೋಲಾರ ಜಿಲ್ಲೆಯ ಶಿಡ್ಲಘಟ್ಟದ ತಹಶೀಲ್ದಾರರ ಕಚೇರಿ ಎದರು ರೈತ ಸಂಘದ ಆಶ್ರಯದಲ್ಲಿ ಧರಣಿ ಸತ್ಯಾಗ್ರಹ ನಡೆಸಲಾಯಿತು. ಧರಣಿ ಸತ್ಯಾಗ್ರಹದ ನೇತೃತ್ವವನ್ನು ಕಾಂ। ಜಿ. ಪಾಪಣ್ಣ, ಎಂ. ಮುನಿಕೃಷ್ಣಪ್ಪ, ಕೆ. ಎಂ. ವೆಂಕಟೇಶ್, ಜಿ. ದೊರೆಸ್ವಾಮಿಯವರು ವಹಿಸಿದ್ದರು.

ರೈತರ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ತಹಶೀಲ್ದಾರರಿಗೆ ಸಲ್ಲಿಸಲಾಯಿತು. ಕೊನೆಯಲ್ಲಿ ನಡೆದ ಸಭೆಯನ್ನುದ್ದೇಶಿಸಿ ಕಾಂ। ಜಿ. ದೊರೆಸ್ವಾಮಿಯವರು ಮಾತನಾಡಿದರು.

ಲೆನಿನ್

ಓ ಲೆನ್ನಿನ್……
ಇತಿಹಾಸದಾಕಾಶದಲಿ
ನೀನೊಂದು ಬರಸಿಡಿಲು
ಪರಾನ್ನಜೀವಿಗಳ
ಬೇರುಗಳ ಕಿತ್ತೆಸೆದ ಗುಡುಗು.

ಕಣಕಣದ ತುಣುಕೆಲ್ಲ
ಸಮತಾವಾದದ ಉಸಿರು
ನರನರನ ಸಾಮ್ಯದಲಿ
ಕಾಣಬಯಸಿದೆ ಹಸಿರು.

ನಿನ್ನ ವಾಗ್ಮಿಂಚುಗಳೆ
ಬಡಜನಕೆ ದೀಪ
ಬಂಡವಳಶಾಹಿಗಳ
ದೌರ್ಜನ್ಯ ವಂಚನೆಯ
ಔಚಿತ್ಯ ಪ್ರಶ್ನಿಸಿದ ಭೂಪ
ತಿಳಿಯಬಾರದೆ ಇನ್ನು
ಬಡವಬಲ್ಲಿದ ಭೇಧ
ಬಿಟ್ಟಿಲ್ಲ ಅವರಿನ್ನು
ಗತವೈಭವದ ಮೋದ.

ನಿನ್ನ ಹೆಸರಿನ ಬೆಡಗು
ವ್ಯಾಪಿಸಿದೆ ಜಗದಲ್ಲಿ
ಸ್ವೈರ್ಯಕು ಘೋಷಣೆಯೆ
ನಿನ್ನ ಕಹಳೆಯ ಗುಡುಗು.

ಇಂದಿನೀ ಯುಗದಲ್ಲಿ
ಸ್ವಾತಂತ್ರ ಶ್ರೇಣಿಯಲ್ಲಿ
ಮರುಕಳಿಸುತಿದೆ ಮತ್ತೆ
ಕಪ್ಪು ಗುಲಾಮರ ಯುಗ
ಕೊನೆಗಾಣಿಸಲು ಈ ಕೃತ್ಯ
ಒರೆಗೆ ಹಚ್ಚಲು ಸತ್ಯ
ಎಂದೆಂದು ಹೋರಾಡುವುದು
ವಿಶ್ವಕಾರ್ಮಿಕ ವರ್ಗ

ಓ ಲೆನ್ನಿನ್……
ನಿನಗಿದೋ ನಮಿಸುವುದು
ವಿಶ್ವ ಕಾರ್ಮಿಕ ವರ್ಗ
ಸಮತ ವಾದವೆ ಅವರ
ಅತಿ ದಿವ್ಯ ಮಂತ್ರ

[ಏಪ್ರಿಲ್ 22-ಲೆನಿನ್‌ರ 12ನೇ ಜನ್ಮದಿನ.]

— ಪಿ. ಮೋಹನ್ ರಾವ್

ನೆಲಮಂಗಲ ರೈತ ಸಂಘಟನಾ ಸಮಿತಿ

5-4-82 ರಂದು ನೆಲಮಂಗಲದಲ್ಲಿ ರೈತ ಸಂಘದ ಸಭೆ ಸೇರಿ ನೆಲಮಂಗಲ ತಾಲ್ಲೂಕು ರೈತ ಸಂಘಟನಾ ಸಮಿತಿಯನ್ನು ರಚಿಸಲಾಯಿತು.

ಈ ಸಮಿತಿಗೆ ಅಧ್ಯಕ್ಷರಾಗಿ ಬೈರೇಗೌಡ, ಉಪಾಧ್ಯಕ್ಷರಾಗಿ ವರದಯ್ಯ, ಕಾರ್ಯದರ್ಶಿಯಾಗಿ ವಸಂತಯ್ಯ, ಸಹ ಕಾರ್ಯದರ್ಶಿಯಾಗಿ ಮುನಿವೆಂಕಟಯ್ಯ ಮತ್ತು ಮಾರುತಿ, ಅಲ್ಲದೆ 18 ಜನರ ಕಾರ್ಯಕಾರೀ ಸಮಿತಿಯನ್ನು ರಚಿಸಲಾಯಿತು.

ಪೋಲಿಸ್ ದೌರ್ಜನ್ಯದ ಖಂಡನೆ

5-4-82 ರಂದು ಕೋಲಾರ ಜಿಲ್ಲೆಯ ಚಿಂತಾಮಣಿ ತಾಲೂಕಿನ ದೊಡ್ಡಗಂಜರುನಲ್ಲಿ ಪೋಲೀಸರ ಅಮಾನುಷ ದಬ್ಬಾಳಿಕೆಯಿಂದಾಗಿಅನೇಕಜನ ಊರು ಬಿಟ್ಟು ಹೋಗಿರುವ ವರದಿಯಾಗಿದೆ. ಈ ಘಟಿದೆ ಜಿಲ್ಲೆಯಾದ್ಯಂತ ಮೇಲಿಂದ ಮೇಲೆ ನಡೆಯುತ್ತಿರುವ ಪೋಲೀಸ್ ದೌರ್ಜನ್ಯದ ಪುನರಾವರ್ತನೆ. ಇತ್ತೀಚೆಗೆ ಪೋಲೀಸ್ ಅಧಿಕಾರಿಯೊಬ್ಬರ ದಬ್ಬಾಳಿಕೆಯನ್ನು ಖಂಡಿಸಿ ಜಿಲ್ಲೆಯಾದ್ಯಂತ ಬಂದ್ ಆಚರಿಸಲಾಗಿತ್ತು.

ದೊಡ್ಡ ಗಂಜರುನಲ್ಲಿ ಗ್ರಾಮಸ್ಥರ ಮೇಲೆ ನಡೆದ ವಿನಾಕಾರಣ ದಬ್ಬಾಳಿಕೆಯನ್ನು ಡಿ ವೈ ಎಫ್ ಐ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಕಾಂ। ಸತ್ಯನಾರಾಯಣ ತೀವ್ರವಾಗಿ ಖಂಡಿಸಿದ್ದಾರೆ.

ಬೆಂಗಳೂರು :

ರಿಸರ್ವ್ ಬ್ಯಾಂಕ್ ನೌಕರರ ಮುಷ್ಕರಕ್ಕೆ ಬೆಂಬಲ

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರು ನೌಕರರ ಮೇಲೆ ಕೆಲಸದ ಒತ್ತಡ (work load) ಹೆಚ್ಚಿಸಿರುವುದು, ನವೀನೀಕರಣದ ಹೆಸರಿನಲ್ಲಿ ನೌಕರರನ್ನು ವಜಾ ಮಾಡುವ ಕುತಂತ್ರದ ವಿರುದ್ಧ RBI ನೌಕರರು 12-4-82 ರಂದು ಸಾಂಕೇತಿಕ ಮುಷ್ಕರ ನಡೆಸಿದರು.

RBI ನೌಕರರ ಹೋರಾಟವನ್ನು ಬೆಂಬಲಿಸಿರುವ ಬೆಂಗಳೂರು ಜಿಲ್ಲಾ ಸಿಐಟಿಯು, ನಿರುದ್ಯೋಗದ ಸಮಸ್ಯೆಯನ್ನು ಕಿಂಚಿತ್ತು ಬಗೆಹರಿಸದ ಸರಕಾರ ಮತ್ತಷ್ಟು ನಿರುದ್ಯೋಗಿಗಳ ಸೃಷ್ಟಿಗೆ ಕಾರಣವಾಗುತ್ತಿರುವುದನ್ನು ತೀವ್ರವಾಗಿ ಖಂಡಿಸಿದೆ. ಗಣಕೀಕರಣದ ಕ್ರಮಗಳನ್ನು ಕೂಡಲೇ ಕೈಬಿಡಬೇಕೆಂದು ಒತ್ತಾಯಿಸಿದೆ.

RBI ನೌಕರರ ನ್ಯಾಯಸಮ್ಮತ ಬೇಡಿಕೆಗಳನ್ನು ಗಮನಿಸದಿರುವ ಕೇಂದ್ರ ಸರಕಾರ ಮುಷ್ಕರ ನಿರತ ಕಾರ್ಮಿಕರ ಮೇಲೆ ತೀವ್ರಕ್ರಮ ಕೈಗೊಳ್ಳುವಂತೆ ಆದೇಶ ನೀಡಿದೆ. ಈ ದಮನಕಾರಿ ಕ್ರಮಗಳ ವಿರುದ್ಧ ಐಕ್ಯ ಹೋರಾಟ ನಡೆಸಬೇಕೆಂದು RBI ನೌಕರರಿಗೆ ಬೆಂಗಳೂರು ಜಿಲ್ಲಾ ಸಿಐಟಿಯು ಮನವಿ ಮಾಡಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ

ಮತೀಯವಾದಿಗಳ ಕುತಂತ್ರ

ಜಮಾಯತ್ - ಎ - ಇಸ್ಲಾಮಿಯ ಮತ್ತವರ ವಿದ್ಯಾರ್ಥಿ ಸಂಘಟನೆಯಾದ ಜಮಾಯತ್-ಎ-ತುಲ್ಬಾಗಳು ಜೊತೆಗೂಡಿ ಅನಂತನಾಗ್ ಜಿಲ್ಲೆ ಮತ್ತಿತರ ಕಡೆ ಮಧ್ಯಪಾನ ವಿರೋಧಿ ಚಳುವಳಿಯ ಹೆಸರಿನಲ್ಲಿ ಧಾಂದಲೆ ಎಬ್ಬಿಸಿವೆ. ಇದೀಗ ಅವುಗಳ ಮುಖವಾಡ ಕಳಚಿ ಬೀಳುತ್ತಿದೆ.

ಪಾಕಿಸ್ತಾನಿ ಮಿಲಿಟರಿ ಆಡಳಿತದಾರರು ಭುಟ್ಟೋರನ್ನು ಗಲ್ಲಿಗೇರಿಸಿದಾಗ ಜಮಾಯತ್-ಎ-ಇಸ್ಲಾಂ ನ ಬೆಂಬಲಿಗರು ಜಮ್ಮು ಮತ್ತು ಕಾಶ್ಮೀರದಲ್ಲಿ ಸಿಹಿ ಹಂಚಿ ತಮ್ಮ ಸಂತೋಷ ವ್ಯಕ್ತ ಪಡಿಸಿದ್ದರು. 'ಇಸ್ಲಾಂ ಗಂಡಾಂತರದಲ್ಲಿದೆ' ಎಂಬ ಕೂಗೆಬ್ಬಿಸಿರುವ ಜಮಾಯತ್-ಎ - ಇಸ್ಲಾಂ ವಿವಿಧ ರಾಜಕೀಯ ಪಕ್ಷಗಳಲ್ಲಿ ತನ್ನ ಬೆಂಬಲಿಗರನ್ನು ತೋರಿಸುತ್ತಿದೆ. ಆಡಳಿತದಲ್ಲೂ ಮುಖ್ಯವಾಗಿ ಪೋಲೀಸ್ ಮತ್ತು ಗೂಢಚಾರ ವಿಭಾಗಗಳಲ್ಲಿ ಇವರುಗಳು ಸೇರಿಕೊಂಡಿದ್ದಾರೆ. ಪ್ರತಿಗಾಮಿ ಇಸ್ಲಾಮಿಕ್ ಆಡಳಿತ ವಿರುವ ದೇಶಗಳೊಂದಿಗಿನ ಜಮಾಯತ್ - ಎ ಇಸ್ಲಾಂ ನ ಸಂಬಂಧ ಇಂದು ರಹಸ್ಯವಾಗಿ ಉಳಿದಿಲ್ಲ. ಇತ್ತೀಚೆಗೆ ಯು.ಎಸ್. ಎ. ನಲ್ಲಿ ನಡೆದ ಸಮ್ಮೇಳನದಲ್ಲಿ ಇಸ್ಲಾಂ ಮೂಲಭೂತವಾದಿ ನಾಯಕರುಗಳು ಭಾಗವಹಿಸಿದ್ದರು. ಜಮ್ಮು ಮತ್ತು ಕಾಶ್ಮೀರದ ಸೂಕ್ಷ್ಮ ಪರಿಸ್ಥಿತಿಯನ್ನು ಗೊಂದಲಮಯವಾಗಿ ಮಾಡುವ ರೂಪುರೇಷೆಯ ಕುರಿತು ಈ ಸಮ್ಮೇಳನದಲ್ಲಿ ಚರ್ಚಿಸಲಾಯಿತೆಂದು ತಿಳಿದು ಬಂದಿದೆ.

ಈ ನಾಯಕರು ಯು. ಎಸ್. ಎ. ನಿಂದ ವಾಪಸ್ ಬಂದ ನಂತರ ಕಮ್ಯುನಿಸ್ಟ್ ವಿರೋಧಿ ಚಟುವಟಿಕೆಯನ್ನು ತೀವ್ರಗೊಳಿಸಿದ್ದೇ ಅಲ್ಲದೇ ಕಾರ್ಮಿಕ ಮತ್ತು ರೈತ ಸಂಘಟನೆಯ ಕಾರ್ಯಕರ್ತರ ಮೇಲೆ ದೈಹಿಕ ದಾಳಿಯನ್ನು ನಡೆಸಲು ಪ್ರಚೋದಿಸುತ್ತಿದ್ದಾರೆ. ಸಾಮರಸ್ಯದಿಂದ ಬಾಳುತ್ತಿರುವ ಜನತೆಯ ನಡುವೆ ವಿಷ ಬೀಜ ಬಿತ್ತುತ್ತಿದ್ದಾರೆ.

ಇಮಾಮ್ ಸಾಬ್ ಶೋಪಿಯನ್ ಎಂಬಲ್ಲಿ ವಿಶ್ವವಿದ್ಯಾಲಯವೊಂದನ್ನು ಜಮಾಯತ್ -ಎ- ಇಸ್ಲಾಂ ಆರಂಭಿಸಲಿದೆ. ಇಲ್ಲಿಂದಲೇ ವಿಚ್ಛಿದ್ರಕಾರಿ ಚಟುವಟಿಕೆಗಳನ್ನು ಹರಡಲಿದೆ. ಶಾಲೆಗಳನ್ನು ತಮ್ಮ ಶಾಖೆಗಳನ್ನಾಗಿ ಮಾಡಿಕೊಂಡು ಚಿಕ್ಕ ವಯಸ್ಸಿನಿಂದಲೇ ವಿದ್ಯಾರ್ಥಿಗಳ ಮನಸ್ಸನ್ನು ವಿಷಗೊಳಿಸುತ್ತಿದೆ.

ಕಳೆದ ಡಿಸೆಂಬರ ಕೊನೆಯಲ್ಲಿ ವಿದ್ಯುತ್ ಕೊರತೆ, ಭ್ರಷ್ಟಾಚಾರಗಳನ್ನು ಪ್ರತಿಭಟಿಸಿ ಶೋಪಿಯನ್‌ನಲ್ಲಿ ನಡೆದ ರೈತರ ಮೆರವಣಿಗೆಯ ಮೇಲೆ ಜಮಾಯತ್-ಎ-ಇಸ್ಲಾಂನ ಬೆಂಬಲಿಗರು ಆಕ್ರಮಣ ಮಾಡಿದ್ದರು. ಈ ಆಕ್ರಮಣಕಾರರನ್ನು ಹೊಡೆದೊಡಿಸಿದ ಮೇಲೆ ಇಸ್ಲಾಂ ಜಾತೀಯವಾದಿಗಳು ಸಿ ಪಿ ಐ (ಎಂ), ಟ್ರೇಡ್ ಯುನಿಯನ್, ಕಿಸಾನ್ ಸಭಾಗಳ ಮೇಲೆ ಉರಿಕಾರುತ್ತಿದ್ದಾರೆ. ಸಿ ಪಿ ಐ (ಎಂ) ಮೇಲೆ 'ಧರ್ಮಯುದ್ಧ' ಸಾರಲು ಮಸೀದಿಗಳನ್ನು ಸತತವಾಗಿ ಉಪಯೋಗಿಸಿಕೊಳ್ಳಲಾಗುತ್ತಿದೆ. ಜಮಾಯತ್‌ನ ಧ್ಯೇಯಗಳನ್ನು ಒಪ್ಪದವರನ್ನು ಕೊಲೆ ಮಾಡಿದರೂ ಇಸ್ಲಾಂ ಒಪ್ಪುತ್ತದೆಂಬ ಪ್ರಚಾರವೂ ಭರದಿಂದ ನಡೆದಿದೆ.

ತಾವುಗಳು ಅಪೇಕ್ಷಿಸಿದ ಬೆಂಬಲ ಜನತೆಯಿಂದ ದೊರೆಯದ ಕಾರಣ ಗೂಂಡಾಪಡೆಗಳನ್ನು ಜಮಾಯತ್‌ನ ನಾಯಕರು ರಚಿಸಿದ್ದಾರೆ. ತಮ್ಮ ಆದೇಶಗಳನ್ನಯ ನಡೆಯದವರ ಮೇಲೆ ಗೂಂಡಾಗಿರಿ ನಡೆಸುವುದೇ ಈ ಗೂಂಡಾ ಪಡೆಯ ಕೆಲಸ. ಬೋಗಮ್ ಎಂಬ ಹಳ್ಳಿಯ ರೈತ ಸಂಘದ ಮೇಲೆ ಈ ಪಡೆ ದಾಳಿ ಮಾಡಿ ರೈತ ಸಂಘದ ಸಕ್ರೀಯ ಕಾರ್ಯಕರ್ತರನ್ನು ಥಳಿಸಿದೆ. ಇವರ ಕುಟುಂಬಗಳ ಮೇಲೂ ಧಾಳಿ ಮಾಡಿದ್ದಾರೆ. ಹೆಂಗಸರನ್ನು ಅಪಮಾನಿಸಲಾಗಿದೆ.

ರೈತ ಸಂಘದ ಕಾರ್ಯಕರ್ತರು ಮಧ್ಯೆ ಪ್ರವೇಶಿಸುವಂತೆ ಅಧಿಕಾರಿಗಳನ್ನು ವಿನಂತಿಸಿಕೊಂಡಾಗ ತಹಸಿಲ್ದಾರರೇ ಆಗಮಿಸಿ ಸ್ಥಳ ವಿಕ್ಷಣೆಮಾಡಿ ಹೋಗಿದ್ದಾರೆ. ಇದೂವರೆಗೆ ಜಮಾಯತ್‌ನ ಗೂಂಡಾಗಳ ಹಿಂಸಾಚಾರ ತಡೆಗಟ್ಟಲು ಆಡಳಿತಕ್ಕೆ ಸಾಧ್ಯವಾಗಿಲ್ಲ,

ಇದೇ ರೀತಿಯ ಹಲ್ಲೆಗಳು ಸೇಂಧು, ದೈಲಿಗಮ್, ಬ್ರಿಂಟಿ ಮುಂತಾದೆಡೆ ನಡೆದಿವೆ. ಆಸ್ತಿಪಾಸ್ತಿ ಲೂಟಿ ಸಹ ನಡೆದಿದೆ. ಸೇಂಧುನಲ್ಲಿ ದಾಳಿಕೋರರನ್ನು ಪ್ರತಿಭಟಿಸಿದಾಗ ಕೊಲೆಮಾಡುವ ಬೆದರಿಕೆ ಹಾಕಿದ್ದಾರೆ.

ಈ ಕಮ್ಯುನಿಸ್ಟ್ ವಿರೋಧಿ ಚಟುವಟಿಕೆಯಿಂದಾಗಿ ರಾಜ್ಯದ ಭದ್ರತೆಗೆ ಗಂಡಾಂತರವಷ್ಟೇ ಅಲ್ಲ ಜಾತ್ಯಾತೀತತೆಗೂ ಧಕ್ಕೆ. ಇಂದು ಜಮಾಯತ್‌ನ ಹಲ್ಲೆ ಕೇವಲ ಕಮ್ಯುನಿಸ್ಟರ ಮೇಲೆ ಮತ್ತು ಪ್ರಗತಿಪರರಿಗಷ್ಟೇ ಸೀಮಿತವಾಗಿದೆ ನಿಜ; ಆದರೆ ನಾಳೆ ಜಾತೀಯತೆಯನ್ನು ವಿರೋಧಿಸುವ ಎಲ್ಲರ ಮೇಲೂ ನಡೆಯುವದು ಶತಸಿದ್ಧ.

ಅನಂತ್‌ನಾಗ್‌ನಲ್ಲಿ ಅಲ್ಪಸಂಖ್ಯಾತರ ಮಧ್ಯದ ಅಂಗಡಿಗಳನ್ನು ಲೂಟಿ ಮಾಡಲಾಗಿದೆ. ಇದು ಜನತೆಯು ದಿನ ನಿತ್ಯ ಭಾದಿಸುತ್ತಿರುವ ಸಮಸ್ಯೆಗಳ ವಿರುದ್ಧ ಹೋರಾಡುವದನ್ನು ತಪ್ಪಿಸಿ ಗಮನ ಬೇರೆಡೆ ಸೆಳೆಯುವ ಜಮಾಯತ್‌ನ ಕುತಂತ್ರ. ಜಮ್ಮು ಕಾಶ್ಮೀರ ಸರಕಾರ ಜಮಾಯತ್‌ನಭಯೋತ್ಪಾದಕ ಕ್ರಮಗಳನ್ನು ತಡೆಗಟ್ಟಲು ಅಸಮರ್ಥವಾಗಿರುವುದು ನಿಚ್ಚಳವಾಗಿದೆ.

ಜಮಾಯತ್‌ನ ಶಕ್ತಿಯನ್ನು ಗಂಭೀರವಾಗಿ ಪರಿಗಣಿಸದೆ ನಿರ್ಲಕ್ಷ್ಯ ವಹಿಸಿದರೆ ಪರಿಸ್ಥಿತಿ ಗಂಡಾಂತರಕಾರಿಯಾದೀತೆಂದು ರಾಜ್ಯ ಸಿ.ಪಿ.ಐ. (ಎಂ) ಘಟಕ ಎಚ್ಚರಿಸಿದೆ. ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳೂ ಜೊತೆಗೂಡಿ ಜಮಾಯತ್ ಚಟುವಟಿಕೆಗಳನ್ನು ತಡೆಗಟ್ಟಬೇಕು. ಇಲ್ಲವಾದಲ್ಲಿ RSSನಂಥ ಹಿಂದೂ ಮತೀಯವಾದಿ ಸಂಘಟನೆ ಬೆಳೆಯುವ ಸಾಧ್ಯತೆ ಉಂಟು ಎಂದು ಸಿ.ಪಿ.ಐ.(ಎಂ) ಎಚ್ಚರಿಸಿದೆ.

●

ಹಳೇ ಸಾಲಗಳನ್ನು ರದ್ದುಗೊಳಿಸುವಂತೆ ರೈತರ ಒತ್ತಾಯ

11-4-82 ರಂದು ಉಡುಪಿ ತಾಲ್ಲೂಕಿನ ಬ್ರಹ್ಮಾವರ ಫಿಕಾಗದ ಕುಂಜಾಲಿನಲ್ಲಿ ರೈತರ ಸಾರ್ವಜನಿಕ ಸಭೆ ನಡೆದು ಗೇಣಿ ಬಾಕಿಯೂ ಸೇರಿದಂತೆ ಹಳೆ ಸಾಲಗಳನ್ನು ರದ್ದುಗೊಳಿಸಲು ಒತ್ತಾಯಿಸಿತು. ಸಭೆಯ ಅಧ್ಯಕ್ಷತೆಯನ್ನು ಕಾಂ| ಡೇವಿಡ್ ಕರ್ಕಡ್ ವಹಿಸಿದ್ದರು. ಆರಂಭದಲ್ಲಿ ಜಿ. ಕೋಟಿಯಾನರು ಸ್ವಾಗತಿಸಿದರು.

ಸಭೆಯನ್ನುದ್ದೇಶಿಸಿ ಬಿ. ರಾಮಚಂದ್ರಭಟ್ ದುತ್ತು ಶ್ರೀಧರ ಕಲ್ಮಾಡಿಯವರು ಮಾತನಾಡುತ್ತಾ ರೈತಾಪಿ ಜನ ತಮ್ಮ ಸಮಸ್ಯೆಗಳನ್ನು ನಿವಾರಿಸಲು ಸಂಘಟನೆಯಾಗುವದಗತ್ಯ ಎಂದು ತಿಳಿಸಿದರು. ಭೃಷ್ಟ ಟ್ರಿಬ್ಯೂನಲ್‌ಗಳಿಂದ ಭೂಮಿ ಕಳೆದುಕೊಂಡ ರೈತರು ಅದಕ್ಕಾಗಿ ಸರಕಾರವನ್ನು ಒತ್ತಾಯಿಸಲು ರೈತ ಸಂಘದಡಿಯಲ್ಲಿ ಅಣಿನೆರೆಯಬೇಕೆಂದು ತಿಳಿಸಿದರು.

ಉಡುಪಿ ರೈತ ಸಂಘದ ಅಧ್ಯಕ್ಷರಾದ ಕಾಂ|| ರಾಮ ಕೆ. ಕುಂದರರು ರೈತ ಚಳುವಳಿಯ ಹೋರಾಟದ ಪರಂಪರೆ ತಿಳಿಸಿದರು.

ಶುಭ ವಿವಾಹ

ಮಾರ್ಚ್ 29 ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿತೈಷಿಗಳಾದ ಗಂಗಯ್ಯ ಮತ್ತು ಕಮಲ (ನರಿಕೊಂಬು ಗ್ರಾಮ–ದ.ಕ. ಜಿಲ್ಲೆ) ಇವರುಗಳ ವಿವಾಹ ನೆರವೇರಿತು. ಅವರು ವಿವಾಹದ ಸವಿನೆನಪಿಗಾಗಿ ಪಕ್ಷದ ಬಂಟ್ವಾಳ ತಾಲ್ಲೂಕು ಸಮಿತಿಗೆ 25 ರೂ ಕೊಡುಗೆ ನೀಡಿದ್ದಾರೆ.

ನೂತನ ದಂಪತಿಗಳಿಗೆ ಸಿ ಪಿ ಐ (ಎಂ) ಬಂಟ್ವಾಳ ತಾಲೂಕು ಸಮಿತಿ ಶುಭಕೋರಿದೆ.

ಗಮನಿಸಿ

★ ಈ ವಾರದ 7 ಪುಟದ 'ಲೆನಿನ್' ಎಂಬ ಶಿರೋನಾಮೆಯಲ್ಲಿ ಪ್ರಕಟವಾದ ಕವನದಲ್ಲಿ, ಕೊನೆಯಲ್ಲಿ 'ಏಪ್ರಿಲ್ 22-ಲೆನಿನ್‌ರ 12ನೇ ಜನ್ಮದಿನ' ಎಂದಿದೆ. ಇದನ್ನು 112ನೇ ಜನ್ಮದಿನ ಎಂದು ಓದಿಕೊಳ್ಳಬೇಕಾಗಿ ಮನವಿ.

★ ಕಳೆದವಾರ (11-4-82) ರ ಐಕ್ಯರಂಗದಲ್ಲಿ 'ಬೀಡಿ ಲೇಬರ್ ಯೂನಿಯುನಿಯನ್ ವಾರ್ಷಿಕ ಮಹಾ ಸಭೆ' ಎಂಬ ತಲೆಬರಹದಡಿಯ ಸುದ್ದಿ (2ನೇ ಪುಟ)ಯಲ್ಲಿ ಸಭೆ ನಡೆದ ಸ್ಥಳ 'ಮಶಲ' ಎಂದು ತಪ್ಪಾಗಿ ಅಚ್ಚಾಗಿದೆ. ಇದನ್ನು ಮಳಲಿ ರೈತ ಸಂಘದ ಬಳಿ ಎಂದು ತಿದ್ದುಪಡಿ ಮಾಡಿಕೊಳ್ಳಬೇಕಾಗಿ ಮನವಿ.

★ ಕಳೆದ ಸಲ [11-4-82] ರ ಐಕ್ಯರಂಗದ ಸಂಪಾದಕೀಯದ 3ನೇ ಪ್ಯಾರಾದ 4ನೇ ಸಾಲಿನಲ್ಲಿ ಸಂವಿಧಾನದ ರೂಲ್ 3 ರಂತೆ... ಎಂದಿದೆ. ಇದನ್ನು ರೂಲ್ 30 ರಂತೆ ಎಂದು ತಿದ್ದುಪಡಿ ಮಾಡಬೇಕು.

ಈ ಅಚಾತುರ್ಯಕ್ಕಾಗಿ ವಿಷಾದಿಸುತ್ತೇವೆ.

ಏಪ್ರಿಲ್ ೨೪ ಮತ್ತು ೨೫ ರಂದು ಬಂಟ್ವಾಳದಲ್ಲಿ ಬೀಡಿ ಮಜೂರರ ೪ನೇ ರಾಜ್ಯ ಸಮ್ಮೇಳನ

ಏಪ್ರಿಲ್ 24 ಮತ್ತು 25 ರಂದು ದ. ಕ. ಜಿಲ್ಲೆಯ ಬಂಟ್ವಾಳದಲ್ಲಿ ರಾಜ್ಯ ಬೀಡಿ ಕಾರ್ಮಿಕರ 4ನೇ ರಾಜ್ಯ ಸಮ್ಮೇಳನ (ಕಳೆದ ವಾರದ ಐಕ್ಯರಂಗದಲ್ಲಿ 3ನೇ ರಾಜ್ಯ ಸಮ್ಮೇಳನ ಎಂದು ಅಚ್ಚಾಗಿತ್ತು. 4ನೇ ರಾಜ್ಯ ಸಮ್ಮೇಳನವೆಂದು ತಿದ್ದುಪಡಿಮಾಡಿಕೊಳ್ಳಬೇಕು) ನಡೆಯಲಿದೆ. ಬಂಟ್ವಾಳದ ಸೀತಾಲಕ್ಷ್ಮಿ ಕಲ್ಯಾಣ ಮಂಟಪದಲ್ಲಿ ಸಮ್ಮೇಳನ ಜರುಗಲಿದೆ. ಸಮ್ಮೇಳನವು ಏಪ್ರಿಲ್ 24 ರಂದು ಬೆಳಗ್ಗೆ 9 ಘಂಟೆಗೆ ಆರಂಭವಾಗಲಿರುವದು.

ಸಮ್ಮೇಳನದ ಅಂಗವಾಗಿ ಏಪ್ರಿಲ್ 25 ರಂದು ಬೃಹತ್ ಬಹಿರಂಗ ಸಭೆ ನಡೆಯಲಿದೆ. ಬಿ. ಸಿ. ರೋಡ್‌ನಿಂದ ಬೀಡಿ ಕಾರ್ಮಿಕರ ಭಾರೀ ಮೆರವಣಿಗೆ ಹೊರಡಿಸಲಾಗುವದು.

ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ| ವಿಮಲಾರಣದಿವೆ, ಸಿ. ಕಣ್ಣನ್, ಸುಶೀಲಾ ಗೋಪಾಲನ್, ಎಸ್. ಸೂರ್ಯನಾರಾಯಣರಾವ್, ಸಿ.ನಂಜುಂಡಪ್ಪ, ಮಹಮ್ಮದ್ ದಸ್ತಗೀರ್, ಸಲೀಮಾಬೇಗಂ ಮೊದಲಾದವರು ಮಾತನಾಡಲಿರುವರು.

ಪ್ರತಿನಿಧಿಗಳು ಸಕಾಲಕ್ಕೆ ಆಗಮಿಸಬೇಕಾಗಿ ಕೋರಿಕೆ.

ಕೆ. ಮೂಸಬ್ಬ
ಅಧ್ಯಕ್ಷ

ವಾಸುಗಟ್ಟಿ
ಕಾರ್ಯದರ್ಶಿ

ಸ್ವಾಗತ ಸಮಿತಿ

ಪರಿಸರ

● ಅಮೇರಿಕದಲ್ಲಿ ಪಾತಕಗಳ ಗಡಿಯಾರದ ವೇಗ ತ್ವರಿತಗೊಳ್ಳುತ್ತಲಿದೆ. ಅಲ್ಲಿ ಎಲ್ಲಾದರೊಂದು ಕಡೆ ಪ್ರತಿ 24 ನಿಮಿಷಕ್ಕೊಮ್ಮೆ ಒಂದು ಕೊಲೆ ಆಗುತ್ತದೆ. ಪ್ರತಿ 10 ಸೆಕೆಂಡಿಗೆ ಒಂದು ಮನೆಯನ್ನು ದೋಚಲಾಗುತ್ತದೆ. ಪ್ರತಿ 7 ನಿಮಿಷಕ್ಕೊಮ್ಮೆ ಒಬ್ಬ ಹೆಣ್ಣಿನ ಮಾನಭಂಗ ನಡೆದಿರುತ್ತದೆ. ಪ್ರತಿ 13 ಸೆಕೆಂಡಿಗೆ ಒಂದು ಕೈಬಂದೂಕ ಮಾರಾಟವಾಗುತ್ತದೆ. ನಾಲ್ಕು ಮಂದಿ ಅಮೇರಿಕನರಿಗೆ ಒಂದು ಪಿಸ್ತೂಲಿನಂತೆ 55 ದಶಲಕ್ಷ ರಿವಾಲ್ವರ್‌ಗಳಿವೆ. ಇದಕ್ಕೆ ವರ್ಷ ವರ್ಷವೂ 20 ಲಕ್ಷ ಪಿಸ್ತೂಲುಗಳ ಸೇರ್ಪಡೆಯಾಗುತ್ತಿರುತ್ತದೆ.

—ಟೈಮ್ಸ್ ಆಫ್ ಇಂಡಿಯಾ

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR ; M. K. BHAT.